# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಮಂಗಳವಾರ, ಆಗಸ್ಟ್ 17, 2021

ಸಂಪುಟ : 48 ಸಂಚಿಕೆ : 95 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ಬೇಡಿಕೆ...** ಶ್ರಾವಣ ಮಾಸದ ಹಿನ್ನೆಲೆಯಲ್ಲಿ ಪಾಟ್ನಾದ ಶಿವನ ಮಂದಿರದಲ್ಲಿರುವ ನಂದಿ ಕಿವಿಯಲ್ಲಿ ತನ್ನ ಆಸೆಗಳನ್ನು ಈಡೇರಿಸುವಂತೆ ಪಿಸುಗುಟ್ಟಿರುವ ಮಹಿಳೆ.

# ಆತಂಕ ಬೇಡ ಶಾಲೆಗೆ ಕಳಿಸಿ

## ಒಂದೇ ಒಂದು ಸೋಂಕು ಕಂಡು ಬಂದರೂ ಶಾಲೆ ಬಂದ್ ಮಾಡುತ್ತೇವೆ

## ತಜ್ಞರ ಸಲಹೆ ಪಡೆದೇ 23 ರಿಂದ 9-12ನೇ ತರಗತಿ ಪ್ರಾರಂಭ: ಸಚಿವ

ಬೆಂಗಳೂರು, ಆ. 16- ಕೋವಿಡ್-19 ಒಂದೇ ಒಂದು ಸೋಂಕು ಕಂಡು ಬಂದರೂ ಶಾಲೆ ಬಂದ್ ಮಾಡುತ್ತೇವೆ. ಅಂಜಿಕೆ ಇಲ್ಲದೆ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಜ್ಞರ ಸಲಹೆ ಮೇರೆಗೆ 9 ರಿಂದ 12ನೇ ತರಗತಿಗಳು ಆಗಸ್ಟ್ 23 ರಿಂದ ಪ್ರಾರಂಭವಾಗುತ್ತಿವೆ. 1 ರಿಂದ 8ನೇ ತರಗತಿಗಳನ್ನು ಸೆಪ್ಟೆಂಬರ್ 1 ರಿಂದ ಪ್ರಾರಂಭಿಸುವ ಸಂಬಂಧ ತಜ್ಞರ ಸಲಹೆ ಪಡೆದು, ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಎರಡು ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದೆಲ್ಲ ಜಿಲ್ಲೆಗಳಲ್ಲಿ 23 ರಿಂದ ಶಾಲೆಗಳು ಆರಂಭವಾಗಲಿವೆ. ಯಾವುದಾದರೂ ಜಿಲ್ಲೆಯಲ್ಲಿ ಸರ್ಕಾರ ನಿಗದಿಪಡಿಸಿರುವ



ಸೋಂಕು ಪ್ರಮಾಣ ಹೆಚ್ಚಳ ಕಂಡು ಬಂದರೆ ಅಲ್ಲಿ ಶಾಲೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳುತ್ತೇವೆ.

ಸರ್ಕಾರ ಸ್ವಯಂ ಪ್ರೇರಿತವಾಗಿ ಶಾಲೆಗಳನ್ನು ಆರಂಭಿಸುವ ನಿರ್ಧಾರ ಕೈಗೊಂಡಿಲ್ಲ. ತಜ್ಞರ ಸಲಹೆ, ಸೂಚನೆಗಳನ್ನು ಆಧಾರವಾಗಿಟ್ಟುಕೊಂಡು ಮಕ್ಕಳು ಮತ್ತು ಪೋಷಕರ ಹಿತದೃಷ್ಟಿಯಿಂದ ಇಂತಹ ನಿರ್ಧಾರ ಕೈಗೊಂಡಿದ್ದೇವೆ.

ಯಾವುದೇ ಶಾಲೆಯಲ್ಲಿ ಒಂದೇ ಒಂದು ಸೋಂಕು ಪ್ರಕರಣ ಕಂಡುಬಂದರೆ ಅಥವಾ ಸುತ್ತಲಿನ ಪರಿಸರದಲ್ಲಿ ಸೋಂಕಿನ ಪ್ರಮಾಣ ಹೆಚ್ಚಾದಲ್ಲಿ ಒಂದು ವಾರದ ಮಟ್ಟಿಗೆ ಶಾಲೆ ಬಂದ್ ಮಾಡುತ್ತೇವೆ.

ಸೋಂಕಿಗೆ ಹೆದರಿ ಪೋಷಕರು ಆತಂಕಗೊಳ್ಳುವುದು ಬೇಡ. ವಿದ್ಯಾರ್ಥಿಗಳನ್ನು ಶಾಲೆಗೆ ಕಳುಹಿಸಿ, ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಬುಧವಾರ ಎಲ್ಲಾ ಜಿಲ್ಲಾಧಿಕಾರಿಗಳೊಟ್ಟಿಗೆ ವಿಡಿಯೋ ಕಾನ್ಫರೆನ್ಸ್ ಮಾಡಿ, ಮಕ್ಕಳ ರಕ್ಷಣೆಗಾಗಿ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಚರ್ಚೆ ಮಾಡುತ್ತೇನೆ.

ಶಾಲೆಗಳಲ್ಲಿ ಯಾವ ರೀತಿ ನಿಯಮಾವಳಿಗಳನ್ನು ಅಳವಡಿಸಬೇಕೆಂಬುದರ ಬಗ್ಗೆ ಸುತ್ತೋಲೆ (3ನೇ ಪುಟಕ್ಕೆ)

## ಡಿಸಿ ಹೆಸರಿನಲ್ಲಿ ನಕಲಿ ಫೇಸ್ ಬುಕ್ ಖಾತೆ

ದಾವಣಗೆರೆ, ಆ.16- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಹೆಸರಿನಲ್ಲಿ ನಕಲಿ ಫೇಸ್ ಬುಕ್ ಖಾತೆ ರಚಿಸಿದ ಆನ್ ಲೈನ್ ವಂಚಕರು ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣ ವರದಿಯಾಗಿದೆ.

ಬೀಳಗಿ ಹೆಸರಿನಲ್ಲಿ ಅವರ ಕುಟುಂಬ ಸಮೇತ ಇರುವ ಫೋಟೋವನ್ನು ಬಳಸಿಕೊಂಡು ಆನ್ ಲೈನ್ ವಂಚಕರು ಸ್ನೇಹದ ಕೋರಿಕೆ ಕಳಿಸಿ, ಅದನ್ನು ಸ್ವೀಕರಿಸಿದವರಿಗೆ ಫೇಸ್ ಬುಕ್ ಮೆಸ್ಸೆಂಜರ್ ಮೂಲಕ ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ. ಈ ವಿಚಾರ ಗೊತ್ತಾಗುತ್ತಿದ್ದಂತೆಯೇ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ತಮ್ಮ ಹೆಸರಿನಲ್ಲಿ ರಚಿಸಲಾಗಿರುವ ನಕಲಿ ಖಾತೆಗೆ ಯಾರೂ ಸಹ ಪ್ರತಿಕ್ರಿಯೆ ನೀಡಬಾರದು ಎಂದು ಮನವಿ ಮಾಡಿದ್ದಾರೆ.

# ದೂಡಾದಿಂದ 8 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

ದಾವಣಗೆರೆ, ಆ.16- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹರಿಹರ ಮತ್ತು ದಾವಣಗೆರೆ ಅವಳಿ ನಗರಗಳಲ್ಲಿ ಕೈಗೊಂಡಿರುವ 8 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನಗರದಲ್ಲಿ ಇಂದು ವಿಧ್ಯುಕ್ತವಾಗಿ ಚಾಲನೆ ದೊರೆಯಿತು.

ದುಗ್ಗಮ್ಮ ದೇವಸ್ಥಾನ ಬಳಿಯ ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ 10 ರ ಸುಲ್ತಾನ್ ಪೇಟೆ, ಆನೆಪ್ಪ ಕೇರಿ, ಗಣೇಶ್ ಪೇಟೆ, ತ್ಯಾಪೇರ್ ಬೀದಿ, ದೇವಾಂಗ ಪೇಟೆ ಹಾಗೂ ಕೊತ್ವಾಲ್ ಪೇಟೆಯಲ್ಲಿ 95 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ನಿರ್ಮಾಣ ಮತ್ತು ರಸ್ತೆಯ ಎರಡು ಬದಿಯಲ್ಲಿ ಪೈಪ್ ಚರಂಡಿ ನಿರ್ಮಿಸುವ ಕಾಮಗಾರಿಗೆ ಶಾಸಕ ಎಸ್.ಎ.

**ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಭೂಮಿ ಪೂಜೆ ನೆರವೇರಿಸಿದ ಸಂಸದ ಸಿದ್ದೇಶ್ವರ, ಶಾಸಕ ರವೀಂದ್ರನಾಥ್**

ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರ, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, (2ನೇ ಪುಟಕ್ಕೆ)



## ರೇವತಿ ನಾಯಕಗೆ ರಾಷ್ಟ್ರ ಮಟ್ಟದ ರ್‍ಯಾಂಕ್ ಗರಿ



ದಾವಣಗೆರೆ, ಆ.16- ರಾಷ್ಟ್ರೀಯ ಕಾನೂನು ಶಾಲೆ ದೇಶಾದ್ಯಂತ ನಡೆಸಿದ ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ (ಸಿಎಲ್‌ಎಟಿ) ಯಲ್ಲಿ ನಗರದ ಕು. ರೇವತಿ ನಾಯಕ ಅವರು ಸಾಮಾನ್ಯ ವರ್ಗದಲ್ಲಿ 16,583 ನೇ ರ್‍ಯಾಂಕ್ ಮತ್ತು ಪರಿಶಿಷ್ಟ ವರ್ಗದ ರಾಷ್ಟ್ರ ಮಟ್ಟದ 176ನೇ ರ್‍ಯಾಂಕ್ ಪಡೆದಿದ್ದಾರೆ.

ಪಂಜಾಬ್‌ನ ರಾಜೀವ್ ಗಾಂಧಿ ನ್ಯಾಷನಲ್ ಕಾನೂನು ಶಾಲೆ ಇಂಡಿಯಾ ಯೂನಿವರ್ಸಿಟಿಯಲ್ಲಿ ರಾಷ್ಟ್ರೀಯ ಪ್ರಥಮ ಆಯ್ಕೆ ಪಟ್ಟಿಯಲ್ಲಿ ಪ್ರವೇಶ ಪಡೆದಿದ್ದಾರೆ.

ಪ್ರತಿವರ್ಷ ನಡೆಯುವ ಈ ಪ್ರವೇಶ ಪರೀಕ್ಷೆಯಲ್ಲಿ ದೇಶದ ನಾನಾ ರಾಜ್ಯಗಳ ಸಾವಿರಾರು ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆಯುತ್ತಾರೆ. 2021ರ ಜುಲೈ 23 ರಂದು ದೇಶದ 22 ರಾಷ್ಟ್ರೀಯ ಕಾನೂನು ಶಾಲೆಗಳಲ್ಲಿ ಇರುವ (3ನೇ ಪುಟಕ್ಕೆ)

# ಟೀಂ ಇಂಡಿಯಾ ಮಿಂಚಿನ ದಾಳಿಗೆ ಇಂಗ್ಲೆಂಡ್ ತತ್ತರ

ಲಾರ್ಡ್ಸ್, ಆ.16- ಲಾರ್ಡ್ಸ್ ಮೈದಾನದಲ್ಲಿ ನಡೆದ 2ನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಇಂಗ್ಲೆಂಡ್ ತಂಡವನ್ನು ಬರೋಬ್ಬರಿ 151 ರನ್‌ಗಳಿಂದ ಸೋಲಿಸಿದೆ.

ಲಾರ್ಡ್ಸ್ ಟೆಸ್ಟ್‌ನ ಕೊನೆಯ ದಿನದಂದು, ಟೀಂ ಇಂಡಿಯಾದ ಬೌಲರ್‌ಗಳ ಉತ್ತಮ ಪ್ರದರ್ಶನದಿಂದ ಬ್ರಿಟಿಷರಿಗೆ ಎರಡು ಸೆಷನ್‌ಗಳನ್ನು ಆಡಲು ಅವಕಾಶ ನೀಡಲಿಲ್ಲ. ಈ ಗೆಲುವಿನೊಂದಿಗೆ ಭಾರತ ತಂಡ ಐದು ಟೆಸ್ಟ್‌ಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ. ಮೊದಲ ಟೆಸ್ಟ್ ಡ್ರಾ ಆಗಿತ್ತು. ಭಾರತ ಗೆಲ್ಲಲು 272 ರನ್‌ಗಳ ಗುರಿ ನೀಡಿತ್ತು. ಇದಕ್ಕೆ ಉತ್ತರವಾಗಿ




ಇಂಗ್ಲೆಂಡ್ ತಂಡವನ್ನು 120 ರನ್ ಗಳಿಗೆ ಆಲ್‌ಔಟ್ ಮಾಡಲಾಯಿತು.

ಭಾರತ ತಂಡದ ಬೌಲರ್‌ಗಳಾದ ಮೊಹಮ್ಮದ್ ಸಿರಾಜ್ (4), ಜಸ್‌ಪ್ರೀತ್ ಬೂಮ್ರಾ (3), ಇಶಾಂತ್ ಶರ್ಮಾ (2) ಮತ್ತು ಮೊಹಮ್ಮದ್ ಶಮಿ (1) ವಿಕೆಟ್ ಪಡೆದುಕೊಂಡರು.

ಬಳಿಕ ಮಿಂಚಿನ ದಾಳಿ ನಡೆಸಿದ ಭಾರತ ಆಟಗಾರರು, ಇಂಗ್ಲೆಂಡ್ ಆಟಗಾರರನ್ನು ಕಟ್ಟಿಹಾಕಿದರು. ಪರಿಣಾಮ 51.5 ಓವರ್‌ಗಳಲ್ಲಿ 120 ರನ್‌ಗಳಿಗೆ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಮೂಲಕ ಪಂದ್ಯ ಕೊನೆಗೊಳ್ಳಲು ಇನ್ನೇನು ಕೆಲವೇ ಕ್ಷಣಗಳಿರುವಾಗ ಭಾರತ ರೋಚಕ ಗೆಲುವು ದಾಖಲಿಸಿದೆ.

ಈ ಪಂದ್ಯದಲ್ಲಿ ಮೊಹಮ್ಮದ್ ಶಮಿ ಹಾಗೂ ಜಸ್‌ಪ್ರೀತಿ ಬೂಮ್ರಾ, ಅವರ ಆಟವು ಭಾರತ ಗೆಲುವಿಗೆ ಕಾರಣವಾಯಿತು.

ಭಾರತ ಅಂತಿಮ (2ನೇ ಪುಟಕ್ಕೆ)

## ಭಾರತ ತಂಡಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಅಭಿನಂದನೆ

ದಾವಣಗೆರೆ, ಆ.16- 2ನೇ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ವಿರುದ್ಧ ಗೆಲುವು ಸಾಧಿಸಿದ ಭಾರತ ತಂಡವನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಅಭಿನಂದಿಸಿದ್ದಾರೆ.


ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ಜಿಲ್ಲಾ ಕ್ರೀಡಾಪಟುಗಳು ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರುಗಳು ಕೂಡ ಭಾರತ ತಂಡವನ್ನು ಅಭಿನಂದಿಸಿದ್ದಾರೆ.

# ಮಿಶ್ರಬೆಳೆ ಪದ್ಧತಿಯಿಂದ ಅನುಕೂಲ

**ಜಗಳೂರು ಶಾಸಕ ಎಸ್.ವಿ. ರಾಮಚಂದ್ರ**

ಜಗಳೂರು, ಆ.16- ರೈತರು ಮಿಶ್ರ ಬೆಳೆ ಪದ್ಧತಿ ಅಳವಡಿಸಿಕೊಂಡರೆ ಒಳ್ಳೆಯದು ಹಾಗೂ ಬೆಳೆಗಳಿಗೆ ಸುರಕ್ಷಿತ ಕೀಟನಾಶಕ ಸಿಂಪಡನೆಗೆ ಮುಂದಾಗಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ಸಲಹೆ ನೀಡಿದರು.

ತಾಲ್ಲೂಕಿನ ಮರೇನಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ ಹಮ್ಮಿಕೊಂಡಿದ್ದ ಸಸ್ಯ ಸಂರಕ್ಷಣಾ ಯೋಜನೆಯಡಿ ಸುರಕ್ಷಿತ ಕೀಟನಾಶಕ ಬಳಕೆ ಮತ್ತು ಬೀಜೋಪಚಾರ ಆಂದೋಲನ ಕುರಿತ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಜಮೀನುಗಳಲ್ಲಿ ಸ್ವಾಭಾವಿಕವಾಗಿ ಎರೆಹುಳುಗಳು ಕಂಡುಬರುತ್ತಿದ್ದವು. ಇತ್ತೀಚಿಗೆ ಕೀಟನಾಶಕಗಳ ಬಳಕೆಯಿಂದ ಎರೆಹುಳುಗಳು ಅವನತಿಯತ್ತ ಸಾಗಿದ್ದು, ನರೇಗಾದಡಿ ಎರೆಹುಳು ಸಾಕಾಣಿಕೆ ತೊಟ್ಟಿ ನಿರ್ಮಿಸಿ, ಬೆಳೆಗಳ (3ನೇ ಪುಟಕ್ಕೆ)

## ಬೀಚ್‌ನಲ್ಲಿ ನಗರದ ಇಬ್ಬರು ವಿದ್ಯಾರ್ಥಿಗಳು ನೀರು ಪಾಲು

ದಾವಣಗೆರೆ, ಆ.16- ನಗರದಿಂದ ಪ್ರವಾಸ ಹೋಗಿದ್ದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಪೈಕಿ ಇಬ್ಬರು ಬೀಚ್‌ನಲ್ಲಿ ಈಜಲು ಹೋಗಿ ನೀರು ಪಾಲಾದ ಘಟನೆ ಇಂದು ಮಧ್ಯಾಹ್ನ ನಡೆದಿದೆ.

ಕಳೆದ ತಿಂಗಳು ಇಂಜಿನಿಯರಿಂಗ್ ಪರೀಕ್ಷೆ ಪೂರೈಸಿದ ಸಂಭ್ರಮದಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡಿದ್ದ 8 - 10 ಹುಡುಗರು ಕುಮುಟಾ - ಕಾರವಾರ ಮಧ್ಯದಲ್ಲಿರುವ ಬಾಗಾ ಬೀಚ್‌ನಲ್ಲಿ ಈಜುತ್ತಿದ್ದ ಸಂದರ್ಭದಲ್ಲಿ ಈ ದುರ್ಘಟನೆ ಸಂಭವಿಸಿದೆ.

ಆಂಜನೇಯ ಬಡಾವಣೆ ವಾಸಿಯೆನ್ನಲ್ಲಾದ ವಿದ್ಯಾರ್ಥಿನಿ ಮತ್ತು ಶಿವಕುಮಾರ ಸ್ವಾಮಿ ಬಡಾವಣೆಯ ವಿದ್ಯಾರ್ಥಿ ಇಬ್ಬರೂ ಮೃತಪಟ್ಟಿದ್ದು, ವಿದ್ಯಾರ್ಥಿನಿಯ ಶವ ಸಂಜೆಯ ವೇಳೆಗೆ ಪತ್ತೆಯಾಗಿದೆ. ವಿದ್ಯಾರ್ಥಿ ಶವ ಪತ್ತೆಗೆ ಕಾರ್ಯಾಚರಣೆ ನಡೆದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾವಿಗೀಡಾಗಿರುವ ವಿದ್ಯಾರ್ಥಿಗಳ ಹೆಸರುಗಳು ನಿಖರವಾಗಿ ತಿಳಿದುಬಂದಿಲ್ಲವಾದರೂ, ವಿದ್ಯಾರ್ಥಿನಿಯ ಹೆಸರನ್ನು ಸ್ವಾತಿ ಎಂದು ಗುರುತಿಸಲಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

## ಹರಪನಹಳ್ಳಿ ಎಪಿಎಂಸಿ ಅಧ್ಯಕ್ಷರಾಗಿ ಮುಂದುವರೆದ ಅಶೋಕ್ ಗೌಡ

ಹರಪನಹಳ್ಳಿ, ಆ.16- ಕಾಂಗ್ರೆಸ್ ಪಕ್ಷದಲ್ಲಿನ ಭಿನ್ನಮತದಿಂದ ಇಲ್ಲಿನ ಎಪಿಎಂಸಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡನೆಯಾಗಿ, ಕೋರ್ಟ್ ತಡೆಯಾಜ್ಞೆಯಿಂದ ಪದೇ ಪದೇ ಮುಂದಕ್ಕೆ ಹೋಗಿದ್ದ ಅವಿಶ್ವಾಸ ಸಭೆ, ಕೊನೆಗೂ ಸದಸ್ಯರ ಗೈರು ಹಿನ್ನೆಲೆಯಲ್ಲಿ ಸೋಲುಂಟಾಗಿ ಅಧ್ಯಕ್ಷರಾಗಿ ಅಶೋಕಗೌಡ ಮುಂದುವರೆದ ಘಟನೆ ಸೋಮವಾರ ಜರುಗಿತು.

ಒಟ್ಟು 15 ನಿರ್ದೇಶಕರಲ್ಲಿ 15 ಜನರೂ ಸಭೆಗೆ ಗೈರಾದರು. ಎಪಿಎಂಸಿಗೆ ಚುನಾವಣೆ ನಡೆದಾಗ 15



ನಿರ್ದೇಶಕರಲ್ಲಿ 14 ಜನ ನಿರ್ದೇಶಕರು ಕಾಂಗ್ರೆಸ್ ಪಕ್ಷದವರಾಗಿದ್ದರು, ಒಂದು ಮಾತ್ರ ಬಿಜೆಪಿಯಾಗಿತ್ತು.

### ಕಾಂಗ್ರೆಸ್‌ನಲ್ಲಿನ ಭಿನ್ನಮತ ; ಅವಿಶ್ವಾಸ ಗೊತ್ತುವಳಿಗೆ ಸೋಲು

ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಂಚಿಕೆ ಸೂತ್ರದಂತೆ ನಿಗದಿತ ಅವಧಿಗೆ ಒಬ್ಬರಂತೆ ಅಧ್ಯಕ್ಷ-ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾ ಬರಲಾಯಿತು.

ನಂದಿಬೇವೂರಿನ ಅಶೋಕ್ ಎಂಬುವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದಾಗ (2ನೇ ಪುಟಕ್ಕೆ)

# ಹರಿಹರ ಅಭಿವೃದ್ಧಿಗೆ ಸ್ಥಳೀಯ ಶಾಸಕರು ಶ್ರಮ ವಹಿಸಲಿ

**ಸಂಸದ ಜಿ.ಎಂ. ಸಿದ್ದೇಶ್ವರ**

ಹರಿಹರ, ಆ.16- ಹರಿಹರ ತಾಲ್ಲೂಕು ಅಭಿವೃದ್ಧಿಗೆ ಸ್ಥಳೀಯ ಶಾಸಕರು ಶ್ರಮ ಹಾಕಬೇಕು. ಸಂಸದನಾಗಿ ನಾನು ಮಾಡುವ ಕೆಲಸವಲ್ಲ. ಆದಾಗ್ಯೂ ಸಹ ನಾನು ಹೆಚ್ಚಿನ ಮುತುವರ್ಜಿಯಿಂದ ನೆನೆಗುದಿಗೆ ಬಿದ್ದಿರುವ ತಾಲ್ಲೂಕಿನ ಕೆಲಸಗಳನ್ನು ಪೂರ್ಣಗೊಳಿಸುವ ಪ್ರಯತ್ನವನ್ನು ಮಾಡುತ್ತಿದ್ದೇನೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ನಗರದ ಲೇಬರ್ ಕಾಲೋನಿಯಲ್ಲಿ 50 ಲಕ್ಷ ರೂ. ವೆಚ್ಚದ ಉದ್ಯಾನವನದ ಕಾಮಗಾರಿ ಮತ್ತು 35 ಲಕ್ಷ ರೂ.ಗಳ ವೆಚ್ಚದಲ್ಲಿ ಕೈಲಾಸ ನಗರದ ಸಾರ್ವಜನಿಕ ಹಿಂದೂ ರುದ್ರಭೂಮಿ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ ನೀಡಿ ಅವರು ಮಾತನಾಡಿದರು.

ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿದಾಗ ಅದನ್ನು ಸದುಪಯೋಗ ಪಡಿಸಿಕೊಳ್ಳದೇ ಹೋದರೆ, ಸರ್ಕಾರ ಮುಂದಿನ ಕೆಲಸಗಳಿಗೆ



ಹೇಗೆ ಹಣವನ್ನು ಬಿಡುಗಡೆ ಮಾಡುತ್ತದೆ? ನಗರದ ಜಿಜಾಮಾತಾ ಕಾಲೋನಿಯಲ್ಲಿ ಗುತ್ತಿಗೆದಾರ ಬಾಷಾ ಎಂಬುವವರು 2018 ರಲ್ಲಿ ಚಾಲನೆ ನೀಡಿರುವ ಕಾಮಗಾರಿ ಮೂರು ವರ್ಷಳಾದರೂ ಮಾಡಿಲ್ಲ ಮತ್ತು ವಿದ್ಯಾನಗರ ಪಾರ್ಕ್ ಅಭಿವೃದ್ಧಿ ಕಾಮಗಾರಿ ಮಾಡದೇ ಇರುವ ಗುತ್ತಿಗೆದಾರರನ್ನು ಬ್ಲಾಕ್ ಲೀಸ್ಟ್‌ನಲ್ಲಿಡಬೇಕು. ನಗರಸಭೆಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಿಸಲು ಸ್ಥಳೀಯ ಶಾಸಕರು ಓಡಾಡಿ ಹಣವನ್ನು ಬಿಡುಗಡೆ ಮಾಡಿಸಿಕೊಂಡು ಬಂದು ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಬೇಕಾಗಿದ್ದು, ಸಂಸದನಾಗಿ ನಾನು ಮಾಡುವ ಕೆಲಸವಲ್ಲ. ಚುನಾವಣೆ ಹತ್ತಿರ ಬರುತ್ತಿದ್ದು, ರಾಮಪ್ಪನವರು ಉಳಿದಿರುವ ಕೆಲಸಗಳನ್ನು ಮಾಡಿಸಲು ಮುಂದಾಗಬೇಕಿದೆ ಎಂದರು.

ನಾನು ಸ್ವತಃ ಮುತುವರ್ಜಿಯಿಂದ ಹರಿಹರ ತಾಲ್ಲೂಕು ನಂದಿಗುಡಿ ರಸ್ತೆಗೆ 13 ಕೋಟಿ ರೂ., ಮಲೇಬೆನ್ನೂರು-ಯಲವಟ್ಟಿ ರಸ್ತೆಗೆ 12.5 ಕೋಟಿ, ಕಡರನಾಯಕನಹಳ್ಳಿ ರಸ್ತೆ, ಸಿರಿಗೆರೆ, ಧೂಳೆಹೊಳೆ ರಸ್ತೆ 3 ಕೋಟಿ, ಸಾರಥಿ ಸೇತುವೆ ನಿರ್ಮಾಣ ಸೇರಿದಂತೆ ಹಲವು ಯೋಜನೆಗಳನ್ನು ಸರ್ಕಾರದ ಗಮನಕ್ಕೆ ತಂದು ಅಭಿವೃದ್ಧಿ ಪಡಿಸಲು (2ನೇ ಪುಟಕ್ಕೆ)




## 25ನೇ ವರ್ಷದ ಪುಣ್ಯಸ್ಮರಣೆ

## ಹೆಚ್. ಬೀರಪ್ಪ

(ನಿಧನ : 17.08.1996)

ನೀವು ನಮ್ಮನ್ನಗಲಿ ಇಂದಿಗೆ 25 ವರ್ಷಗಳಾದವು.
ಸದಾ ನಿಮ್ಮ ನೆನಪು ಮತ್ತು
ಮಾರ್ಗದರ್ಶನದಲ್ಲಿರುವ.....

✦ ಹೆಚ್. ಬೀರಪ್ಪ ಅಂಡ್ ಸನ್ಸ್, ವರ್ತಕರು
ಮಕ್ಕಳಾದ : ✦ ಹೆಚ್.ಬಿ. ಗೋಣೆಪ್ಪ, ಮಾಜಿ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
ಶ್ರೀಮತಿ ಕರಿಬಸಮ್ಮ ಮತ್ತು ಮಕ್ಕಳು ✦ ಹೆಚ್.ಬಿ. ರೇವಣಪ್ಪ, ಶ್ರೀಮತಿ ಸೌಭಾಗ್ಯಮ್ಮ ಮತ್ತು ಮಕ್ಕಳು
✦ ಹೆಚ್.ಬಿ. ಮಂಜುನಾಥ, ಶ್ರೀಮತಿ ನಾಗರತ್ನಮ್ಮ ಮತ್ತು ಮಕ್ಕಳು
✦ ಬಿ. ರಾಜು ಶ್ರೀಮತಿ ವಸಂತಲಕ್ಷ್ಮಿ ಮತ್ತು ಮಕ್ಕಳು ✦ ಹೆಚ್.ಬಿ. ಉಮೇಶ, ಶ್ರೀಮತಿ ಶಾರದಮ್ಮ
ಹಾಗೂ ಚಿ|| ಸಹನ ✦ ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು
ಬೆನಕನಹಳ್ಳಿ ಎಂ. ಇಸ್ಮಾಯಿಲ್ ಸಾಹೇಬ್ ಅಂಡ್ ಸನ್, ಮರ್ಚೆಂಟ್ಸ್

# ಗಣತಿ ವರದಿ ಸಿದ್ದರಾಮಯ್ಯ ಹೇಳಿ ಬರೆಸಿದ್ದು



ಬೆಂಗಳೂರು, ಆ. 16- ಕಾಂಗ್ರೆಸ್ ಅವಧಿಯಲ್ಲಿ ನಡೆಸಲಾದ ಜಾತಿ ಗಣತಿ ವರದಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿ ಬರೆಸಿರುವ ವರದಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಗೆ ಇದನ್ನೇ ಅಸ್ತ್ರವನ್ನಾಗಿಟ್ಟುಕೊಂಡು ರಾಜಕೀಯ ಮಾಡಲು ಸಿದ್ದರಾಮಯ್ಯ ಹೊರಟಿದ್ದಾರೆ ಎಂದು ಆರೋಪಿಸಿದ್ದಾರೆ.

ಅದು ಹಿಂದುಳಿದ ವರ್ಗಗಳ ಶಾಶ್ವತ ಆಯೋಗಗಳ ವರದಿಯಲ್ಲ. ಸರ್ಕಾರದಿಂದ 160 ಕೋಟಿ ರೂ. ವೆಚ್ಚ ಮಾಡಿ, ಇವರೇ ಬರೆದು, ಅಂದಿನ ಆಯೋಗದ ಅಧ್ಯಕ್ಷ ಕಾಂತರಾಜ ಅವರ ಶಸ್ಸೆ ಒತ್ತಿಸಿದ್ದಾರೆ ಎಂದು ಹರಿಹಾಯ್ದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ವಿಚಾರದಲ್ಲಿ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ. ಅವರಿಗೆ ಮಾಡಲು ಕೆಲಸವಿಲ್ಲ. ಮೈತ್ರಿ ಸರ್ಕಾರದಲ್ಲಿ ನಾನು ಅನುಷ್ಠಾನಗೊಳಿಸಿಲ್ಲ ಎನ್ನುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಯಾಕೆ ಜಾರಿಗೊಳಿಸಿಲ್ಲ ಎಂದು ಪ್ರಶ್ನಿಸಿದರು.

ಇವರೊಬ್ಬರೇ ಹಿಂದುಳಿದ ನಾಯಕರಲ್ಲ. ಆ ಹೆಸರಿನಲ್ಲಿ ರಾಜಕೀಯ ಮಾಡಲು ಹೊರಟಿದ್ದಾರೆ. ಇವರು ಮುಖ್ಯಮಂತ್ರಿಯಾಗಿದ್ದಾಗ ದಲಿತ ಸಮುದಾಯಕ್ಕೆ ದಕ್ಕಬೇಕಾದ ಆಶ್ರಯ ಮನೆಗಳನ್ನು ಬೇರೆ ಸಮಾಜಕ್ಕೆ ನೀಡಿದ್ದಾರೆ.

ಈ ಬಗ್ಗೆ ಎಲ್ಲಾ ದಾಖಲೆಗಳನ್ನು ನಾನು ಅವರ ಹೋರಾಟದ ಸಮಯದಲ್ಲಿ ಬಿಡುಗಡೆ ಮಾಡುತ್ತೇನೆ. ಇವರ ರಾಜಕೀಯ ಪುನರ್ ಜೀವಕ್ಕೆ ಅಹಿಂದ ಬೇಕು. ಆದರೆ ಮಾಡುವುದೆಲ್ಲ ಬೇರೆ ಕೆಲಸ. ಅದರ ಬಣ್ಣವನ್ನು ಬಯಲು ಮಾಡುವುದಾಗಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

# ಲಾರಿ ಮಾಲೀಕರಿಂದ ಲೋಡಿಂಗ್, ಅನ್‌ಲೋಡಿಂಗ್ ಸ್ಥಗಿತ



ದಾವಣಗೆರೆ, ಆ.16- ಲೋಡಿಂಗ್ ಮತ್ತು ಅನ್‌ಲೋಡಿಂಗ್ ಸಂದರ್ಭದಲ್ಲಿ ಲಾರಿ ಮಾಲೀಕರಿಂದ ವಸೂಲಿ ಮಾಡು ತ್ತಿರುವ ಮಾಮೂಲು ಹಣದ ಭೂತವನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಲಾರಿ ಮಾಲೀಕರ ಸಂಘದ ಪದಾಧಿಕಾರಿ ಗಳು ಲೋಡಿಂಗ್, ಅನ್‌ಲೋಡಿಂಗ್ ಸ್ಥಗಿತಗೊಳಿಸುವ ಮೂಲಕ ಪ್ರತಿಭಟನೆ ನಡೆಸಿದರು.

ನಗರದ ಎಪಿಎಂಸಿ, ಇಂಡಸ್ಟ್ರೀಯಲ್ ಏರಿಯಾ, ಮಂಡಕ್ಕಿ ಭಟ್ಟಿ, ಈರುಳ್ಳಿ ಮಾರುಕಟ್ಟೆ, ಕೆ.ಆರ್.ಮಾರುಕಟ್ಟೆ ಸೇರಿದಂತೆ ವಿವಿಧ ಕಡೆಗಳಿಗೆ ತೆರಳಿದ ಸಂಘದ ಪದಾಧಿಕಾರಿಗಳು, ಜಿಲ್ಲಾ, ಅಂತರ್ ಜಿಲ್ಲಾ, ರಾಜ್ಯ ಮತ್ತು ಅಂತರ್ ರಾಜ್ಯ ಮಟ್ಟದಲ್ಲಿ ಬರುವ ಲಾರಿಗಳಿಂದ ಸರಕು ಇಳಿಸುವಿಕೆ ಮತ್ತು ಏರುವಿಕೆ ಸಂದರ್ಭದಲ್ಲಿ ವರ್ತಕರು ಲಾರಿ ಮಾಲೀಕರಿಂದಲೇ ಹಮಾಲರಿಗೆ ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಲಾರಿ ಮಾಲೀಕರದ್ದು ಕೇವಲ ಸರಕನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಕೆಲಸ ಆಗಿರುತ್ತದೆ. ಆದರೆ ವರ್ತಕರು ಲಾರಿ ಮಾಲೀಕರು ಮತ್ತು ಹಮಾಲರನ್ನು ಶೋಷಣೆ ಮಾಡುತ್ತಿದ್ದಾರೆ. ಪ್ರತಿ ಟನ್ನಿಗೆ 120 ರಿಂದ 130 ರೂ.ಗಳನ್ನು ಹಮಾಲಿಯಾಗಿ ಲಾರಿ ಮಾಲೀಕರಿಂದಲೇ ವಸೂಲಿ ಮಾಡುತ್ತಿದ್ದಾರೆ. ಅಲ್ಲದೇ ಈ ರೀತಿ ಪಡೆದ ಹಣದಲ್ಲಿ ಹಮಾಲರಿಗೆ ಕೇವಲ 20ರಿಂದ 30 ರೂ.ಗಳನ್ನಷ್ಟೇ ಮಾತ್ರ ನೀಡುತ್ತಿದ್ದು ಉಭಯತರನ್ನು ಶೋಷಣೆ ಮಾಡುತ್ತಿದ್ದಾರೆ ಎಂದು ಸಂಘದ ಅಧ್ಯಕ್ಷ ನನ್ನು ಸಾಬ್ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತಂತೆ ಈಗಾಗಲೇ ರಾಷ್ಟ್ರಮಟ್ಟ ದಲ್ಲೇ ಚರ್ಚೆ ನಡೆದು ಕಳೆದ ಜುಲೈ 15 ರಿಂದಲೇ ದೇಶಾದ್ಯಂತ ಲೋಡಿಂಗ್, ಅನ್‌ಲೋಡಿಂಗ್ ನಿಷೇಧ ಮಾಡಲಾಗಿದೆ. ಇದೀಗ ರಾಜ್ಯದಲ್ಲಿ ಚರ್ಚೆ ನಡೆದು ಸೋಮವಾರದಿಂದಲೇ ಲೋಡಿಂಗ್, ಅನ್‌ಲೋಡಿಂಗ್ ನಿಷೇಧ ಮಾಡಲಾಗಿದೆ. ಹಮಾಲರು ಮಾಡುವ ಕೆಲಸಕ್ಕೆ ವರ್ತಕರೇ ಹಮಾಲಿ ನೀಡಬೇಕು. ಆದರೆ, ಅದನ್ನು ಬಿಟ್ಟು ನಮ್ಮ ಕಡೆಯಿಂದಲೇ ಹಮಾಲಿ ಕೊಡಿಸುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಓಂಪ್ರಕಾಶ್, ಜಮೀರ್ ಅಹಮ್ಮದ್, ಬಾಬು ಸಾಬ್, ಇದಾಯತ್‌ವುಲ್ಲಾ, ದಿನೇಶ್, ಬಸವರಾಜ ನಾಯ್ಕ, ಶಾಂತಕುಮಾರ್, ಶಿವಕುಮಾರ್, ಪವನ್ ಕುಮಾರ್ ಸೇರಿದಂತೆ ಇತರರು ಇದ್ದರು.

## ಮಿಶ್ರಬೆಳೆ ಪದ್ಧತಿಯಿಂದ ಅನುಕೂಲ

(1ನೇ ಪುಟದಿಂದ) ಸಂರಕ್ಷಣೆ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪೂರ್ವಜರು ಸ್ವತಃ ಮನೆಗಳಲ್ಲಿ ತೊಗರಿ ಸೇರಿದಂತೆ ಇತರೆ ಅಕ್ಕಡಿ ಬೆಳೆಗಳ ಬೀಜಗಳನ್ನು ತಯಾರಿಸುತ್ತಿದ್ದರು. ಮೆಕ್ಕೆಜೋಳ ಬೆಳೆಗೆ ಮಾರುಹೋಗಿ ಅಕ್ಕಡಿ ಬೆಳೆಗಳು ಮಾಯವಾಗುತ್ತಿವೆ. ರೈತರು ಇಲಾಖೆಗಳ ಸಲಹೆ ಪಡೆದು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯಬೇಕು ಎಂದು ಸಲಹೆ ನೀಡಿದರು.

ಸರ್ಕಾರದ ಯೋಜನೆಗಳನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಜಮೀನಿನಲ್ಲಿನ ಬೆಳೆ ಮಾಹಿತಿಯನ್ನು ಬೆಳೆ ಸಮೀಕ್ಷೆ ಆ್ಯಪ್ ಬಳಸಿ ಆ್ಯಪ್ ಲೋಡ್ ಮಾಡಬೇಕು ಎಂದರು.

ಉಪನಿರ್ದೇಶಕ ಆರ್. ತಿಪ್ಪೇಸ್ವಾಮಿ ಮಾತನಾಡಿ, ತೊಗರಿ ಸಸ್ಯದ ಕುಡಿ ಚಿವುಟಿದರೆ ಅಂತರ ಕಾಪಾಡಿಕೊಂಡು ಹೂ, ಮೊಗ್ಗು, ಧಾನ್ಯಗಳು ಮಾರ್ಪಟ್ಟು 6 ತಿಂಗಳ ಬೆಳೆ ಉತ್ತಮ ಇಳುವರಿ ಸಾಧ್ಯ. ಸೊರಗು ರೋಗ ಆಕ್ರಮಿಸಿದರೆ ಅಂತಹ ಗಿಡವನ್ನು ಕಿತ್ತು ಹಾಕಬೇಕು ಎಂದು ಮಾಹಿತಿ ನೀಡಿದರು. ತೊಗರಿ ಬೆಳೆಯ ಸಸ್ಯದ ಕುಡಿಯನ್ನು ಇಲಾಖೆಗಳಿಂದ ನೀಡಿದ ಸೋಲಾರ್ ಯಂತ್ರದ ಮೂಲಕ ಕಟ್ ಮಾಡಿದರೆ ಉತ್ತಮ ಇಳುವರಿ ಪಡೆಯಬಹುದು ಎಂದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು ಮಾಹಿತಿ ನೀಡಿ, ಅಕ್ಕಡಿ ಬೆಳೆಗಳಲ್ಲಿ ತೊಗರಿ ಬೆಳೆ ಫಸಲಿಗೆ ಆಗಮಿಸಿದಾಗ ಕಾಯಿ, ಹೂ ಬಿಡುವ ವೇಳೆ ಎರಡು ಭಾಗಗಳ ಕಿಷ್ಕಿಂಧೆಯಲ್ಲಿ ಬೆಳೆದು ಇಳುವರಿ ಕಡಿಮೆಯಾಗದಂತೆ ಈ ರೀತಿ ತುದಿಯನ್ನು ಕಟಾವು ಮಾಡಲು ರೈತರು ಮುಂದಾಗಬೇಕು. ಆಗ ಹೆಚ್ಚಾಗಿ ಲಾಭ ಗಳಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ಪ.ಪಂ. ಅಧ್ಯಕ್ಷ ಆರ್ . ತಿಪ್ಪೇಸ್ವಾಮಿ, ಸದಸ್ಯ ನವೀನ್, ಗ್ರಾ.ಪಂ. ಅಧ್ಯಕ್ಷ ತಿಪ್ಪೇಸ್ವಾಮಿ, ದೇವೇಂದ್ರಪ್ಪ, ಸದಸ್ಯರಾದ ಶ್ವೇತಾ, ತಿಪ್ಪೇಸ್ವಾಮಿ, ಹಿರಿಯ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ, ತಾ.ಪಂ. ಇಓ ಲಕ್ಷ್ಮೀಪತಿ, ಪಶು ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜು, ಕೃಷಿ ಇಲಾಖೆಯ ಹರ್ಷ, ಪಿಡಿಓ ಮೂಗಣ್ಣ ಹಾಗೂ ರೈತರು ಭಾಗವಹಿಸಿದ್ದರು.

## ಜಗಳೂರು ಕ್ಷೇತ್ರದಲ್ಲಿಂದು ಸಂಸದರ ಪ್ರವಾಸ

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 2 ರವರೆಗೆ ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಉಚ್ಚಂಗಿದುರ್ಗ, ಅರಸೀಕೆರೆ, ಕೆರೆಗುಡಿಹಳ್ಳಿ ಮತ್ತು ಹೊಸಕೋಟೆ ಗ್ರಾಮಗಳಲ್ಲಿ ಅಂದಾಜು 6.76 ಕೋಟಿ ರೂ. ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ಮತ್ತು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

## ಮಲೇಬೆನ್ನೂರಿಗೆ ವಿಜಯೇಂದ್ರ ಭೇಟಿ



ಮಲೇಬೆನ್ನೂರು, ಆ.16- ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಟ್ಟಣದ ಹೊರವಲಯದಲ್ಲಿನ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ನಿನ್ನೆ ಭೇಟಿ ನೀಡಿ ವೀರಭದ್ರೇಶ್ವರ, ಮಹಾಗಣಪತಿ, ಭದ್ರಕಾಳಿ, ನಾಗಪರಿವಾರ, ಕಾಲಭೈರವ ದೇವರ ದರ್ಶನ ಪಡೆದರು.


ಖನಿಜ ನಿಗಮದ ಅಧ್ಯಕ್ಷ ಲಿಂಗಮೂರ್ತಿ, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಿ. ಪಂಚಪ್ಪ, ಉಪಾಧ್ಯಕ್ಷ ಬಿ. ಚಿದಾನಂದಪ್ಪ, ಟ್ರಸ್ಟಿಗಳಾದ ಬಿ. ಮಹಾರುದ್ರಪ್ಪ, ಬಿ. ಶಂಭುಲಿಂಗಪ್ಪ, ಬಿ.ವಿ. ರುದ್ರೇಶ್, ಬಿ.ಎಂ. ಹರ್ಷ ಮತ್ತು ಉಪನ್ಯಾಸಕರಾದ ಹೊನ್ನಾಳಿ ಗಂಗಾಧರ್, ಎಸ್.ಎನ್. ಶಂಭುಲಿಂಗಪ್ಪ, ಬಟ್ಟೆ ಅಂಗಡಿ ವಿಶ್ವ, ಹೊಸಳ್ಳಿ ಕರಿಬಸಪ್ಪ, ಅಕ್ಕಿ ವರ್ತಕ ಹೆಚ್.ಎಸ್. ವೀರಭದ್ರಯ್ಯ ಇನ್ನಿತರರು ಹಾಜರಿದ್ದರು.

## ಬ್ಯಾಂಕ್ ಕನ್ನಕ್ಕೆ ವಿಫಲ ಯತ್ನ

ದಾವಣಗೆರೆ, ಆ.16- ಬ್ಯಾಂಕ್‌ಗೆ ಕನ್ನ ಹಾಕಿರುವ ಕಳ್ಳರು, ಹಣ ದೋಚಲು ಯತ್ನಿಸಿ ವಿಫಲರಾಗಿದ್ದು, ಅಳವಡಿಸಲಾಗಿದ್ದ ಸಿಸಿ ಕ್ಯಾಮರಾ ಸೇರಿದಂತೆ ಲಕ್ಷಕ್ಕೂ ಅಧಿಕ ಮೌಲ್ಯದ ಯಂತ್ರೋಪಕರಣಗಳನ್ನು ಕಳವು ಮಾಡಿರುವ ಘಟನೆ ಕಕ್ಕರಗೊಳ್ಳ ಗ್ರಾಮದಲ್ಲಿ ನಡೆದಿದೆ.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಗೆ ಇದೇ ದಿನಾಂಕ 13ರಂದು ಬ್ಯಾಂಕಿನ ಶಾಖಾಧಿಕಾರಿಯ ಕೊಠಡಿಯ ಕಿಟಕಿ ಸರಳು ಮುರಿದು ಒಳನುಗ್ಗಿ ಸೈರನ್, ಸಿಸಿ ಕ್ಯಾಮರಾ ಕೇಬಲ್ ಕಟ್ಟು ಮಾಡಿ ಕಿತ್ತು ಹಾಕಿದ್ದಾರೆ. ಲಾಕರ್ ರೂಂಗೆ ಹೋದ ಕಳ್ಳರು, ಎರಡು ಲಾಕರ್‌ಗಳಲ್ಲಿ ಒಂದನ್ನು ಗ್ಯಾಸ್ ಕಟರ್ ನಿಂದ ಮುರಿಯಲು ಪ್ರಯತ್ನಿಸಿ, ವಿಫಲರಾಗಿದ್ದಾರೆ. ಕೈಗೆ ಸಿಕ್ಕ 4 ಸಿಸಿ ಕ್ಯಾಮರಾಗಳು, ಡಿವಿಆರ್, ಸೈರನ್, ಫ್ರೆಡಂ, ಸೀಸ್ಕೊಂ ರೋಟರ್, ಸ್ವಿಚ್ ಕಳವು ಮಾಡಿದ್ದಾರೆ. ಸದ್ಯಕ್ಕೆ ಬ್ಯಾಂಕ್‌ನ ಹಣ ಕಳ್ಳತನವಾಗಿಲ್ಲ. ಘಟನಾ ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

## ಶಾಸಕ ಎಸ್. ರಾಮಪ್ಪ ಅವರಿಂದ ಇಂದು ಭದ್ರೆಗೆ ಬಾಗಿನ



ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಹರಿಹರದ ಶಾಸಕ ಎಸ್. ರಾಮಪ್ಪ ಅವರು ಇಂದು ಬೆಳಿಗ್ಗೆ 11.30 ಕ್ಕೆ ಬಾಗಿನ ಅರ್ಪಿಸಲಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು, ರೈತರು ಬೆಳಿಗ್ಗೆ 9 ಗಂಟೆಗೆ ಕೊಮಾರನಹಳ್ಳಿಯ ಕೆರೆ ಸಮೀಪ ಆಗಮಿಸಿ, ಇಲ್ಲಿಂದ ಶಾಸಕರೊಂದಿಗೆ ಭದ್ರಾ ಡ್ಯಾಂಗೆ ತೆರಳುವಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಕೋರಿದ್ದಾರೆ.

ಅಲ್ಲದೆ, ಇದೇ ದಿನ ಹರಿಹರ ಎಪಿಎಂಸಿ ವತಿಯಿಂದ ಮತ್ತು ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ವತಿಯಿಂದಲೂ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸಲಾಗುವುದು ಎಂದು ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬಹುಜನ ಸಮಾಜ ಪಕ್ಷದ ಕಚೇರಿ ಉದ್ಘಾಟನೆ

ಬಹುಜನ ಸಮಾಜ ಪಕ್ಷದ ಜಿಲ್ಲಾ ಕಚೇರಿ ಉದ್ಘಾಟನೆ ಮತ್ತು ಪಕ್ಷದ ಕಾರ್ಯಕರ್ತರ ಸಭೆ ಇಂದು ಬೆಳಿಗ್ಗೆ 12 ಗಂಟೆಗೆ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಿತಿಯ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಕಚೇರಿ ಉದ್ಘಾಟನೆ ನೆರವೇರಿಸಲಿದ್ದು, ಮತ್ತೋರ್ವ ರಾಜ್ಯ ಉಸ್ತುವಾರಿ ಎಂ. ಗೋಪಿನಾಥ್, ರಾಜ್ಯ ಪ್ರಧಾನ ಕಾರ್ಯದರ್ಶಿ ಆರ್. ಮುನಿಯಪ್ಪ ಹಾಗೂ ಹೆಚ್. ಮಲ್ಲೇಶ್ ಮುಖ್ಯಅತಿಥಿಗಳಾಗಿ ಪಾಲ್ಗೊ ಳ್ಳುವರು ಎಂದು ಸಮಿತಿಯ ಜಿಲ್ಲಾ ಅಧ್ಯಕ್ಷ ಡಿ. ಹನುಮಂತಪ್ಪ ತಿಳಿಸಿದ್ದಾರೆ.

## ನಗರಕ್ಕೆ ನಾಳೆ ಜಿಲ್ಲಾ ಸಚಿವ ಭೈರತಿ

ದಾವಣಗೆರೆ, ಆ.16- ನಗರಾಭಿವೃದ್ಧಿ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ನಾಡಿದ್ದು ದಿನಾಂಕ 18 ರಂದು ನಗರಕ್ಕೆ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ ಬೆಂಗಳೂರಿನಿಂದ ಹೊರಡುವ ಸಚಿವರು, ಸಂಜೆ 4 ಗಂಟೆಗೆ ನಗರಕ್ಕೆ ಆಗಮಿಸುವರು. ಬಳಿಕ ಪಕ್ಷದಿಂದ ಹಮ್ಮಿಕೊಂಡಿರುವ ಜನಾಶೀರ್ವಾದ ಯಾತ್ರೆ ಸಮಾವೇಶದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಸಂಜೆ 6.30ಕ್ಕೆ ಹಿರಿಯೂರಿಗೆ ತೆರಳುವರು.

## ಸಂಗೊಳ್ಳಿ ರಾಯಣ್ಣ ಜನ್ಮ ದಿನಾಚರಣೆ




ಮಲೇಬೆನ್ನೂರು, ಆ.16- ಇಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಜನ್ಮ ದಿನಾಚರಣೆ ಅಂಗವಾಗಿ ರಾಯಣ್ಣ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು. ನಂತರ ಸಿಹಿ ವಿತರಿಸಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಪಿ.ಕೆ. ನಾಗಪ್ಪ, ಕಾರ್ಯದರ್ಶಿ ಕೆ.ಪಿ. ಗಂಗಾಧರ್, ತೋಟಗಾರಿಕೆ ಇಲಾಖೆಯ ಅಧೀಕ್ಷಕ ಪಿ.ಜಿ. ಚಿದಾನಂದ್, ಪಿ.ಎಸ್. ಸೋಮಶೇಖರ್, ಪಿ.ಎಸ್. ಶಿವಕುಮಾರ್, ಪೂಜಾರ್ ಮಹೇಶ್, ಪಿ.ಬಿ. ಬೀರಪ್ಪ ಇನ್ನಿತರರಿದ್ದರು.

## ಆತಂಕ ಬೇಡ ಶಾಲೆಗೆ ಕಳಿಸಿ

(1ನೇ ಪುಟದಿಂದ) ಹೊರ ಬೀಳಲಿದೆ. ಅದರಂತೆ ವಿದ್ಯಾರ್ಥಿಗಳು ಮತ್ತು ಶಾಲಾ ಸಿಬ್ಬಂದಿ ನಡೆದುಕೊಳ್ಳಬೇಕು.

ಮಕ್ಕಳಿಗೆ ಹಾಜರಾತಿ ಕಡ್ಡಾಯ ಮಾಡಿಲ್ಲ. ಪೋಷಕರು ತಮ್ಮ ಮಕ್ಕಳನ್ನು ಶಾಲೆಗಾದರೂ ಕಳುಹಿಸಬಹುದು, ಇಲ್ಲವೇ ಆನ್‌ಲೈನ್ ತರಗತಿಗಳನ್ನಾದರೂ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಮಕ್ಕಳು ಮಾಸ್ಕ್ ಧರಿಸಿ ಶಾಲೆಗೆ ಬರುವುದು ಕಡ್ಡಾಯ. ಶಾಲೆಗೆ ಬಂದು ಮನೆಗೆ ಹೋಗುವ ತನಕ ಮಾಸ್ಕ್ ತೆಗೆಯುವಂತಿಲ್ಲ. ಅವರ ಪೋಷಕರೇ ಕರೆದುಕೊಂಡು ಬಂದು ವಾಪಸ್ ಕರೆದುಕೊಂಡು ಹೋಗಬೇಕು ಎಂದು ಅವರು ತಿಳಿಸಿದರು.

ಶಾಲೆಯ ಆವರಣದಲ್ಲಿ ಮಕ್ಕಳು ಕಲಿತರೆ ಜ್ಞಾನ ವಿಕಾಸ ಉತ್ತಮವಾಗಿರುತ್ತದೆ ಎಂದು ತಜ್ಞರು ಅಭಿಪ್ರಾಯ ನೀಡಿದ್ದಾರೆ. ಅದನ್ನು ಸರ್ಕಾರ ಪುರಸ್ಕರಿಸಿದೆ ಎಂದ ಶಿಕ್ಷಣ ಸಚಿವರು, ಶಾಲೆ-ಕಾಲೇಜುಗಳ ಸ್ವಚ್ಛತೆ, ನಿರ್ವಹಣೆ, ಮೇಲುಸ್ತುವಾರಿಗೆ ಸಂಬಂಧಿಸಿದಂತೆ ಎಲ್ಲ ಜಿಲ್ಲಾಧಿಕಾರಿಗಳ ಸಹಕಾರ ಪಡೆಯಲಾಗುತ್ತಿದೆ. ಅಲ್ಲದೆ, ಎಲ್ಲ ನಗರಸಭೆ, ಪಟ್ಟಣ ಪಂಚಾಯಿತಿ ಆಡಳಿತಗಳ ನೆರವನ್ನೂ ಪಡೆದುಕೊಳ್ಳಲಾಗುತ್ತಿದೆ ಎಂದು ಸಚಿವ ನಾಗೇಶ್ ವಿವರಿಸಿದರು.

ಕೊರೊನಾ 3ನೇ ಅಲೆ, ಇನ್ನೊಂದೆಡೆ ಹಲವಾರು ಜಿಲ್ಲೆಗಳಲ್ಲಿ ಸೋಂಕು ಉಲ್ಬಣ ಆಗುತ್ತಿರುವ ಹಿನ್ನೆಲೆಯಲ್ಲಿ ಈ ತಿಂಗಳಿನಿಂದಲೇ ಶಾಲೆ ಆರಂಭ ಮಾಡುವುದು ಬೇಡ ಎಂದು ಖಾಸಗಿ ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳ ಒಕ್ಕೂಟದ (ಫನಾ) ಅಧ್ಯಕ್ಷ ಡಾ.ಪ್ರಸನ್ನ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಸದ್ಯದ ಸ್ಥಿತಿಯಲ್ಲಿ ಶಾಲೆಗಳ ಆರಂಭ ಒಳ್ಳೆಯದಲ್ಲ. 3ನೇ ಅಲೆ ಭೀತಿ ತೀವ್ರವಾಗಿದೆ. ಕೇರಳ ಮತ್ತು ಮಹಾರಾಷ್ಟ್ರ ಪರಿಸ್ಥಿತಿ ಗಂಭೀರವಾಗಿದೆ. ಎಚ್ಚರ ತಪ್ಪಿದರೆ ಅನಾಹುತ ಕಟ್ಟಿಟ್ಟ ಬುತ್ತಿ. 3ನೇ ಅಲೆಯಲ್ಲಿ ಮಕ್ಕಳಿಗೇ ತೊಂದರೆ ಆಗುತ್ತದೆ ಎಂದು ಕೆಲ ಅಧ್ಯಯನಗಳು ಹೇಳಿವೆ ಎಂದು ಅವರು ಗಮನ ಸೆಳೆದಿದ್ದಾರೆ. ಇನ್ನು, ರಾಜಧಾನಿ ಬೆಂಗಳೂರಿನಲ್ಲಿ ಪರಿಸ್ಥಿತಿ ತೀವ್ರವಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲೆಯನ್ನು ಹೊರತುಪಡಿಸಿ ಕಾಲೇಜುಗಳನ್ನು ಆರಂಭಿಸಬಹುದು ಎಂದು ಪ್ರಸನ್ನ ಹೇಳಿದ್ದಾರೆ.

## ಬಿಜೆಪಿ ವತಿಯಿಂದ ಗೌರವ ಸಮರ್ಪಣೆ



ದಾವಣಗೆರೆ, ಆ.16 - ಗುರು ಪೂರ್ಣಿಮೆ ಅಂಗವಾಗಿ ಮಾಧ್ಯಮಿಕ ಶಾಲಾ ಹಿಂದಿ ಶಿಕ್ಷಕಿಯಾಗಿದ್ದ ದಯಾಮರಣ ಹೋರಾಟಗಾರ್ತಿ ಶ್ರೀಮತಿ ಹೆಚ್. ಬಿ.ಕರಿಬಸಮ್ಮ ಅವರನ್ನು ಬಿಜೆಪಿ ವತಿಯಿಂದ ಗೌರವ ಸಮರ್ಪಣೆ ಮಾಡಲಾಯಿತು. ವಿಧಾನ ವಿಧಾನ ಪರಿಷತ್‌ನ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್.ಶಿವಯೋಗಿ ಸ್ವಾಮಿ ಅವರು ಕರಿಬಸಮ್ಮ ಅವರನ್ನು ಸನ್ಮಾನಿಸಿದರು. ರಾಜ್ಯ ಬಿಜೆಪಿ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್, ಬಿಜೆಪಿ ಶಿಕ್ಷಕರ ಪ್ರಕೋಷ್ಠದ ರಾಜ್ಯ ಸಹ ಸಂಚಾಲಕ ಕೆ.ಎಂ.ಸುರೇಶ್, ಮಹಾನಗರ ಪಾಲಿಕೆಯ ಸದಸ್ಯ ಪ್ರಸನ್ನ ಕುಮಾರ್, ಉತ್ತರ ಮಂಡಲ ಕಾಯದರ್ಶಿ ಪದ್ಮನಾಭ ಶೆಟ್ಟಿ, ಮಂಡಲ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಪವನ್ ಕುಮಾರ್ ಇತರರಿದ್ದರು.

# ಸಿ.ಟಿ.ರವಿ, ಈಶ್ವರಪ್ಪ ವಿವಾದಾತ್ಮಕ ಹೇಳಿಕೆಗೆ ಬಿಜೆಪಿ ವರಿಷ್ಠರ ಕುಮ್ಮಕ್ಕು

ದಾವಣಗೆರೆ, ಆ.16- ದೇಶಕ್ಕಾಗಿ ತ್ಯಾಗ, ಬಲಿದಾನ ಮಾಡಿದ ನೆಹರು ಕುಟುಂಬದ ಬಗ್ಗೆ ಶಾಸಕ ಸಿ.ಟಿ. ರವಿಯ ಅವಮಾನಿಸುವ ಹೇಳಿಕೆ, ಕಾಂಗ್ರೆಸ್ ಮತ್ತು ಕಾಂಗ್ರೆಸ್ ನಾಯಕರ ಬಗ್ಗೆ ಸಚಿವ ಕೆ.ಎಸ್. ಈಶ್ವರಪ್ಪ ಟೀಕಿಸಲು, ತಮ್ಮ ಪಕ್ಷದ ಸರ್ಕಾರದ ವೈಫಲ್ಯ ಮರೆಮಾಚಲು ಬಿಜೆಪಿ ವರಿಷ್ಠರ ಕುಮ್ಮಕ್ಕು ಇದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ ಆರೋಪಿಸಿದ್ದಾರೆ.

ಹಿಂದಿನ ಸಿದ್ದರಾಮಯ್ಯ ಸರ್ಕಾರ ಸ್ಥಾಪಿಸಿದ್ದ ಇಂದಿರಾ ಕ್ಯಾಂಟೀನ್ ಹೆಸರು ಬದಲಿಸಬೇಕೆಂದು ಹೇಳುವ ಭರದಲ್ಲಿ ನೆಹರು, ಇಂದಿರಾ ಗಾಂಧಿ ಬಗ್ಗೆ ಅವಹೇಳನ ಮಾಡಿರುವ ಸಿ.ಟಿ. ರವಿ ತಮ್ಮ ಹೆಸರನ್ನು ಪೋಲಿ, ಪುಂಡ, ಘಟಿಂಗ ರವಿ ಎಂದು ಬದಲಿಸಿಕೊಳ್ಳಲಿ. ಸಿ.ಟಿ. ರವಿ ಮೊದಲಿನಿಂದಲೂ ನಾಲಿಗೆ ಹರಿಬಿಟ್ಟು ಕ್ರಿಮಿನಲ್ ಕೇಸ್ ಹೊಂದಿರುವವರಾಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಈ ನಾಡಿನ ಅನ್ನ, ನೀರು, ಗಾಳಿ ಸೇವಿಸಿ, ಚಿಕ್ಕಮಗಳೂರು ಜನತೆಯ ಆಶೀರ್ವಾದದಿಂದ ಶಾಸಕರಾಗಿರುವ ಸಿ.ಟಿ. ರವಿ ಮೇಕೆದಾಟು ಅಣೆಕಟ್ಟು ವಿಚಾರದಲ್ಲಿ ತಮಿಳುನಾಡಿಗೆ ಬೆಂಬಲ ನೀಡಿದ್ದು, ಜನತೆ ಇವರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ನೆಹರು ಮತ್ತು ಇಂದಿರಾ ಗಾಂಧಿಯ ಜೀವನಗಾಥೆಯ ಬಗ್ಗೆ ಅರಿತುಕೊಳ್ಳಲೆಂದು ಈ ಇಬ್ಬರ ಮಹನೀಯರ ಪುಸ್ತಕಗಳನ್ನು ಸಿ.ಟಿ. ರವಿ ಮತ್ತು ಕೆ.ಎಸ್. ಈಶ್ವರಪ್ಪ ಈ ಇಬ್ಬರಿಗೂ ಕೋರಿಯರ್ ಮೂಲಕ ಕಳುಹಿಸಿ ಕೊಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಕೆ.ಎಂ. ಮಂಜುನಾಥ್, ಎಂ.ಕೆ. ಲಿಯಾಖತ್ ಅಲಿ, ಮೊಹಮ್ಮದ್ ಜಿಕ್ರಿಯಾ, ಆರ್‌ಬಿಝುಡ್ ಬಾಷಾ, ಡಿ. ಶಿವಕುಮಾರ್, ಫಾರೂಕ್, ಸುರೇಶ್ ಜಾಧವ್ ಇದ್ದರು.

## ವೃದ್ಧಾಶ್ರಮದಲ್ಲಿ ಸ್ವಾತಂತ್ರ್ಯೋತ್ಸವ

ದಾವಣಗೆರೆ, ಆ.16- ತುರ್ಚಘಟ್ಟದ ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಪುಷ್ಪಲತಾ ಪವಿತ್ರರಾಜ್ ಮತ್ತಿತರರಿದ್ದರು.

## ರ್‍ಯಾಂಕ್ ಗರಿ

(1ನೇ ಪುಟದಿಂದ) 2308 ಆಸನ ಗಳ ಪ್ರವೇಶಕ್ಕಾಗಿ 76 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ರೇವತಿ ನಾಯಕ ಅವರು ನಗರದ ಸಿದ್ದಗಂಗಾ ಶಾಲೆ, ಎವಿಕೆ ಕಾಲೇಜಿ ನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ರೇವತಿ ನಾಯ್ಕ್, ಹಿರಿಯ ರೈತ ಮುಖಂಡ ಹುಚ್ಚವ್ವನಹಳ್ಳಿ ಮಂಜುನಾಥ್ ಅವರ ಪುತ್ರಿ.

# ಸರ್ಕಾರಿ ಶಾಲೆಯಲ್ಲಿ ಹೆಚ್ಚು ಅಂಕ ಗಳಿಸಿದ್ದ ಶಿಕ್ಷಕರಿದ್ದರೂ ಸಹ ನಾವೇಕೆ ನಮ್ಮ ಮಕ್ಕಳನ್ನು ಖಾಸಗಿ ಶಾಲೆ ಸೇರಿಸುತ್ತೇವೆ...

**ಓದುಗರ ಪತ್ರ**

ಮಾನ್ಯರೇ,

ಶಿಕ್ಷಣ ವ್ಯವಸ್ಥೆ ಉದ್ಯಮವಾಗಿ ಮಾರ್ಪಟ್ಟು ಹಣ ಗಳಿಸುವುದೇ ಖಾಸಗಿ ವಿದ್ಯಾಸಂಸ್ಥೆಗಳ ಕಾಯಕವೇನೋ ಎಂಬಂತೆ ಭಾಸವಾಗುತ್ತಿದೆ, ಪೋಷಕರುಗಳಿಗೆ ತಮ್ಮ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ದೊಡ್ಡ ದೊಡ್ಡ ಖಾಸಗಿ ಶಾಲೆಗಳಿಗೇ ತಮ್ಮ ಮಕ್ಕಳನ್ನು ಸೇರಿಸುತ್ತಾರೆ ಎನ್ನಿಸುತ್ತದೆ.

ಎಲ್ಲಾ ಕಡೆ ಸರ್ಕಾರಿ ಶಾಲೆಗಳು ಇದ್ದು ಅಲ್ಲಿ ಪ್ರತಿವರ್ಷ ಮಕ್ಕಳ ಸಂಖ್ಯೆ ಕುಂಠಿತವಾಗುತ್ತಿದೆ, ಆದರೆ ಪ್ರತಿವರ್ಷ ಖಾಸಗಿ ಶಾಲೆಗಳ ಅನುಮತಿಗಾಗಿ ಬರುವ ಅರ್ಜಿಗಳು ಮಾತ್ರ ಲೆಕ್ಕವಿಲ್ಲದಷ್ಟು ಎಂಬುದು ಮಾತ್ರ ಸತ್ಯ.

ಸರ್ಕಾರಿ ಶಾಲೆ ಹಾಗೂ ಖಾಸಗಿ ಶಾಲೆಗಳಲ್ಲಿನ ಪಠ್ಯ ಕ್ರಮಗಳೇನು ಬದಲು ಇರುವುದಿಲ್ಲ, ಇನ್ನು ಹೆಚ್ಚಿಗೆ ಹೇಳಬೇಕೆಂದರೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ನೇಮಕವಾಗುವ ಅಭ್ಯರ್ಥಿಗಳು ಅತಿ ಹೆಚ್ಚು ಅಂಕ ಗಳಿಸಿ ಪ್ರವೇಶ ಪರೀಕ್ಷೆ ಉತ್ತೀರ್ಣರಾಗಿ ಆಯ್ಕೆಯಾಗಿರುತ್ತಾರೆ, ಇಲ್ಲಿ ಪ್ರಯತ್ನಪಟ್ಟು ಆಯ್ಕೆಯಾಗದ ಅಭ್ಯರ್ಥಿಗಳೇ ಖಾಸಗಿ ಶಾಲೆಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಾರೆ, ಅಂದಮೇಲೆ ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲೆಯಲ್ಲಿ ಅಲ್ಲದೆ, ಖಾಸಗಿ ಶಾಲೆಯಲ್ಲಿ ದೊರೆಯಲು ಸಾಧ್ಯವೇ??? ಎಂಬುದನ್ನು ನಾವುಗಳು ಯೋಚಿಸಬೇಕಾಗಿದೆ.

ಅತ್ಯುತ್ತಮ ದರ್ಜೆಯ ಶಿಕ್ಷಕರು ಇದ್ದರೂ ಸರ್ಕಾರಿ ಶಾಲೆಯಲ್ಲಿ ವ್ಯವಸ್ಥಿತ ರೀತಿಯ ಆಡಳಿತ ಮಂಡಳಿ ಇರದ ಕಾರಣ ಸರ್ಕಾರಿ ಶಾಲೆಯಲ್ಲಿನ ಶಿಕ್ಷಣದ ಕುರಿತು ಪೋಷಕರಿಗೆ ಮನದಟ್ಟು ಮಾಡುವಲ್ಲಿ ಸರ್ಕಾರ ವಿಫಲವಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಕೆಲಸ ಸಿಗದ ಶಿಕ್ಷಕರುಗಳನ್ನು ಬಳಸಿಕೊಂಡು ಖಾಸಗಿ ವಿದ್ಯಾಸಂಸ್ಥೆಗಳು ವ್ಯವಸ್ಥಿತ ರೀತಿಯ ಪ್ರಚಾರದಿಂದ ಪೋಷಕರನ್ನು, ಮಕ್ಕಳನ್ನು ತಮ್ಮ ಶಾಲೆ ಕಡೆಗೆ ಸೆಳೆಯುವಲ್ಲಿ ಯಶಸ್ವಿಯಾಗುತ್ತಿವೆ.

ಸರ್ಕಾರದಿಂದ ಹೆಚ್ಚಿನ ಅನುದಾನಗಳು ಬಂದರೂ ಸಹ ಭ್ರಷ್ಟಾಚಾರದಿಂದ ಉತ್ತಮ ದರ್ಜೆಯ ಕಟ್ಟಡವನ್ನು ಕಟ್ಟಲು ಸಾಧ್ಯವಾಗುತ್ತಿಲ್ಲ... ಉದಾಹರಣೆಗೆ ಸರ್ಕಾರದಿಂದ ಒಂದು ಕೊಠಡಿ ನಿರ್ಮಿಸಲು 10 ರಿಂದ 12 ಲಕ್ಷ ಹಣ ಬಿಡುಗಡೆ ಮಾಡಲಾಗುತ್ತದೆ, ಸಾಮಾನ್ಯವಾಗಿ ಇಷ್ಟು ಹಣಕ್ಕೆ ಒಂದು ವ್ಯವಸ್ಥಿತ ಕೊಠಡಿ ನಿರ್ಮಿಸಬಹುದು. ಆದರೆ ಇಂದಿನ ಸರ್ಕಾರಿ ಶಾಲೆಗಳ ಕೊಠಡಿಗಳನ್ನು ನೋಡಿದರೆ ಎಷ್ಟು ಹಣ ಪೋಲಾಗುತ್ತಿದೆ ಎಂದು ಅಂದಾಜಿಸಬಹುದು.

ಖಾಸಗಿ ಶಾಲೆಯಲ್ಲಿ ಆಡಳಿತ ಮಂಡಳಿಯೇ ಕಟ್ಟಡ ನಿರ್ಮಿಸುವುದರಿಂದ ಅತಿ ಕಡಿಮೆ ಹಣಕ್ಕೆ ಉತ್ತಮ ದರ್ಜೆಯ ಕಟ್ಟಡ ನಿರ್ಮಿಸಿ ವ್ಯವಸ್ಥಿತ ರೀತಿಯ ಪೀಠೋಪಕರಣಗಳನ್ನು ಒದಗಿಸಿ ಪೋಷಕರನ್ನು, ಮಕ್ಕಳನ್ನು ತಮ್ಮತ್ತ ಸೆಳೆಯುವ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಸರ್ಕಾರ ಏನೇ ಕ್ರಮ ತೆಗೆದುಕೊಂಡರೂ ಖಾಸಗಿ ವಿದ್ಯಾ ಸಂಸ್ಥೆಗಳು ಮಾತ್ರ ಚಾಣಾಕ್ಷತನದಿಂದ ಪೋಷಕರಿಂದ ಫೀಸ್ ವಸೂಲಿ ಮಾಡುತ್ತಿರುವುದು ಮಾತ್ರ ನಿಂತಿಲ್ಲ, ಆನ್ಲೈನ್ ಕ್ಲಾಸ್ ಎನ್ನುವ ಮೂಲಕ ಪ್ರತಿವರ್ಷದಂತೆ ಈಗಲೂ ಸಹ ಪೋಷಕರಿಂದ ಫೀಸ್ ಪಡೆಯುತ್ತಿದ್ದು, ಸಾಮಾನ್ಯ ಜನರು ಪೀಸ್ ಕಟ್ಟಲು ಸಾಧ್ಯವಿಲ್ಲದೆ ಈಗ ಸರ್ಕಾರಿ ಶಾಲೆಗಳತ್ತ ಮುಖ ಮಾಡುತ್ತಿರುವುದು ಮಾತ್ರ ಸತ್ಯ.....

ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ಜಿಲ್ಲಾ ಮಟ್ಟದಲ್ಲಿ ಡಿಡಿಪಿಐ, ತಾಲ್ಲೂಕು ಮಟ್ಟದಲ್ಲಿ ಬಿಇಒ, ವಲಯವಾರು ಮಟ್ಟದಲ್ಲಿ ಸಿ ಆರ್ ಪಿ, ಶಾಲಾ ಮಟ್ಟದಲ್ಲಿ ಮುಖ್ಯ ಉಪಾಧ್ಯಾಯರಿದ್ದರೂ ಸರ್ಕಾರಿ ಶಾಲೆಯನ್ನು ಅಭಿವೃದ್ಧಿಪಡಿಸಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಕರೆತರಲು ಸಾಧ್ಯವಾಗುತ್ತಿಲ್ಲ ಎನ್ನುವುದಾದರೆ ಶಿಕ್ಷಣ ವ್ಯವಸ್ಥೆಯೇ ತಲೆ ತಗ್ಗಿಸ ಬೇಕಲ್ಲವೇ?????

ಸರ್ಕಾರಿ ಶಾಲೆಯಲ್ಲಿ ಶಿಕ್ಷಕರ ಪಾತ್ರದ ಜೊತೆಗೆ ಶಾಲಾ ಅಭಿವೃದ್ಧಿ ಮಂಡಳಿಯ ಪಾತ್ರವು ಬಹಳ ಮುಖ್ಯವಾಗಿದ್ದು, ಮುಂದಿನ ದಿನಗಳಲ್ಲಿ ಈ ಮಂಡಳಿಗೆ ವಿದ್ಯಾವಂತ ಪೋಷಕರುಗಳನ್ನು ಆಯ್ಕೆ ಮಾಡಿ, ಇಲ್ಲಿ ಆಗುತ್ತಿರುವ ಭ್ರಷ್ಟಾಚಾರವನ್ನು ತಡೆದು, ಸರ್ಕಾರಿ ಶಾಲೆಗಳನ್ನು ಯಶಸ್ಸಿನತ್ತ ಕೊಂಡೊಯ್ಯಬೇಕಾದ ಕಾರ್ಯವನ್ನು ಸರ್ಕಾರ ಮತ್ತು ಶಿಕ್ಷಣ ಇಲಾಖೆ ದಿಟ್ಟ ಕ್ರಮದಿಂದ ಮಾಡಬೇಕಾಗಿದೆ.

**ಕೆ.ಎಲ್.ಹರೀಶ್**, ಬಸಾಪುರ.

## ಸಾರ್ವಜನಿಕ ಪ್ರಕಟಣೆ

**ನನ್ನ ಕಕ್ಷಿದಾರರಾದ 1) ಶ್ರೀಮತಿ ನಾರಮ್ಮ ಕೋಂ ರೇವಣಸಿದ್ದಪ್ಪ ವಾಸ: ಹಳೇಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು 2) ಶ್ರೀಮತಿ ಗೌರಮ್ಮ ಕೋಂ ರಾಮಪ್ಪ ವಾಸ: ಶಾಮನೂರು ಗ್ರಾಮ, ದಾವಣಗೆರೆ 3) ಶ್ರೀ ಎಂ. ಜಗದೀಶ್ ಬಿನ್ ಲೇ. ಮುನಿಯಪ್ಪ, 4) ಶ್ರೀ ಎಂ. ನಾಗರಾಜ್ ಬಿನ್ ಲೇ ಮುನಿಯಪ್ಪ 5) ಶ್ರೀ ಎಂ. ಶಿವರಾಜ್ ಬಿನ್ ಲೇ. ಮುನಿಯಪ್ಪ 6) ಶ್ರೀ ಎಂ.ಶೇಖರಪ್ಪ ಬಿನ್ ಲೇ. ಮಹದೇವಪ್ಪ, 7) ಶ್ರೀ ಎಂ.ಯೋಗೇಶಪ್ಪ ಬಿನ್ ಲೇ. ಮಹದೇವಪ್ಪ, 8) ಶ್ರೀ ಎಂ. ನಾರಪ್ಪ ಬಿನ್ ಲೇ. ಮಹದೇವಪ್ಪ, 9) ಶ್ರೀ ಮಂಜಪ್ಪ ಬಿನ್ ಲೇ. ಮಹದೇವಪ್ಪ 3 ರಿಂದ 9ರವರ ವಾಸ : ಯರಗುಂಟೆ ಗ್ರಾಮ, ದಾವಣಗೆರೆ ಮತ್ತು 10) ಶ್ರೀಮತಿ ಸೌಭಾಗ್ಯಮ್ಮ ಕೋಂ ನಾಗರಾಜ್ ವಾಸ: ಕೊಂಡಜ್ಜಿ ಗ್ರಾಮ, ದಾವಣಗೆರೆ ತಾಲ್ಲೂಕು, ಮೊ 98448 55075** ಅವರ ಪರವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತಿಗೆ ಸಂಪೂರ್ಣ ಮಾಲೀಕರು ಮತ್ತು ಹಕ್ಕುದಾರರು ಎಂದು ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆ ಇವರು ಅಸಲು ದಾವೆ ಸಂಖ್ಯೆ 40/2011 ಪ್ರಕರಣದಲ್ಲಿ ದಿನಾಂಕ 10.7.2012 ರಂದು ರಾಮದಾಸ್ ಬಿನ್ ಪಾಂಡುರಂಗಪ್ಪ ಇವರ ವಿರುದ್ಧ ದಾವೆ ದಾಖಲಿಸಿದ್ದು ಸದರಿ ದಾವೆಯಲ್ಲಿ ನಮ್ಮ ಕಕ್ಷಿದಾರರು ಮಾಲೀಕರೆಂದು ತೀರ್ಪು ಮತ್ತು ಡಿಕ್ರಿಯಾಗಿರುತ್ತದೆ. ಸದರಿ ಸಿವಿಲ್ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ದಾವಣಗೆರೆಯ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ 10.04.2013 ರಂದು ಎಸ್.ಆರ್.ನಂ. 828/2013-14ರಲ್ಲಿ ನೋಂದಾವಣೆಯಾಗಿರುತ್ತದೆ. ಆ ಪ್ರಕಾರ ಅಪೀಲುದಾರರ ಹೆಸರಿಗೆ ಎಂ.ಆರ್.ನಂ. ಹೆಚ್ 7/2013/14ರ ಪ್ರಕಾರ ಖಾತೆ ಮತ್ತು ಪಹಣಿ ದಾಖಲಾಗಿರುತ್ತದೆ. ಹೀಗಿದ್ದರೂ ಸಹ ಸದರಿ ಪ್ರಕರಣದಲ್ಲಿ ಪ್ರತಿವಾದಿಯಾಗಿದ್ದ ರಾಮದಾಸ್ ಬಿನ್ ಪಾಂಡುರಂಗಪ್ಪ ಇವರಿಗೆ ಷೆಡ್ಯೂಲ್ ಸೊತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ಸಹ ಪಿ.ಹೆಚ್ ನಂದಿಗೌಡ ಬಿನ್ ಪಟೇಲ್ ಹಾಲಪ್ಪಇವರು ತಮ್ಮ ಹೆಸರಿಗೆ ಕ್ರಯಪತ್ರವನ್ನು ಮಾಡಿಕೊಂಡಿದ್ದು, ಸದರಿ ಕ್ರಯಪತ್ರವು ಸೃಷ್ಠಿ ಮಾಡಿಕೊಂಡಂತಹ ದಾಖಲೆಯಾಗಿರುತ್ತದೆ. ಸದರಿ ಸೃಷ್ಠಿ ಮಾಡಿಕೊಂಡಂತಹ ದಾಖಲೆ ಆಧಾರದ ಮೇಲೆ ಎಂ.ಆರ್.ನಂ. ಹೆಚ್8/ 2018-19 ರಂತೆ ಪಿ.ಹೆಚ್. ನಂದಿಗೌಡ ಇವರು ತನ್ನ ಹೆಸರಿಗೆ ಅಕ್ರಮವಾಗಿ ಖಾತೆ ಬದಲಾವಣೆ ಮಾಡಿಸಿಕೊಡಿರುತ್ತಾರೆ. ಮತ್ತು ಅವರ ಮರಣಾನಂತರ ಅವರ ಹೆಂಡತಿ ಮಕ್ಕಳಾದ ಶ್ರೀಮತಿ ಶ್ರೀ ಪಿ.ಎನ್ ದಾನಮ್ಮ ಕೋಂ ಲೇ. ಪಿ.ಹೆಚ್. ನಂದಿಗೌಡ ಮತ್ತು ಮಕ್ಕಳಾದ ಶ್ರೀಮತಿ ಎನ್.ಶೀಲಾ , ಶ್ರೀ ಪಿ.ಎನ್. ಹರೀಶ್, ಶ್ರೀ ಪಿ.ಎನ್ ಮಹೇಂದ್ರ, ಶ್ರೀ ಚಾಮರಾಜ್, ಪಿ.ಎನ್ ಶ್ವೇತಾ, ಮತ್ತು ಪಿ.ಎನ್ ಶೃತಿ ಇವರುಗಳು ಷೆಡ್ಯೂಲ್ ಸೊತ್ತಿನ ಖಾತೆಯನ್ನು ಪೌತಿ ಆಧಾರದ ಮೇಲೆ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಸದರಿ ಮೇಲೆ ಹೇಳಿದ ಎರಡು ಮ್ಯುಟೇಷನ್ ಆದೇಶಗಳು ಅಕ್ರಮವಾಗಿ ಮಾಡಿಕೊಂಡಂತಹ ದಾಖಲೆಯಾಗಿರುವುದರಿಂದ ಅವುಗಳನ್ನು ಪ್ರಶ್ನಿಸಿ ಮಾನ್ಯ ಉಪ ವಿಭಾಗಾಧಿಕಾರಿಗಳವರ ನ್ಯಾಯಾಲಯ ದಾವಣಗೆರೆ ಇವರಲ್ಲಿ ಆರ್.ಎ.ನಂ. 41/2020-21 ಪ್ರಕರಣವನ್ನು ದಾಖಲಿಸಿರುತ್ತಾರೆ. ಈ ಹಂತದಲ್ಲಿ ಸದರಿ ಪಿ.ಹೆಚ್. ನಂದಿಗೌಡ ಇವರ ವಾರಸುದಾರರುಗಳು ಷೆಡ್ಯೂಲ್ ಸೊತ್ತನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿರುವುದು ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುತ್ತದೆ. ಆ ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಷೆಡ್ಯೂಲ್ ಸೊತ್ತಿನ ಬಗ್ಗೆ ಪಿ.ಹೆಚ್. ನಂದಿಗೌಡ ಇವರ ವಾರಸುದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಇವರಲ್ಲಿ ಪ್ರಕರಣ ಚಾಲ್ತಿಯಲ್ಲಿರುವ ಕಾರಣ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ತಿಳಿಯಪಡಿಸಲಾಗಿದೆ. ಒಂದು ವೇಳೆ ಅವರೊಂದಿಗೆ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದಲ್ಲಿ ನಮ್ಮ ಕಕ್ಷದಾರರಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬಾತಿ ಗ್ರಾಮದ ಸ.ನಂ 88/1 ವಿಸ್ತೀರ್ಣ 04 ಎಕರೆ 12 ಗುಂಟೆ ಜಮೀನಿಗೆ ಚಕ್ಕುಬಂದಿ

**ಪೂರ್ವಕ್ಕೆ : ಭರಮಪ್ಪನವರ ಜಮೀನು ಪಶ್ಚಿಮಕ್ಕೆ : ಟಿ.ಆರ್ ಸುಜಾತ ಇವರ ಜಮೀನು ಉತ್ತರಕ್ಕೆ: ಕರೂರು ನಾಗರಾಜಪ್ಪನವರ ಜಮೀನು ದಕ್ಷಿಣಕ್ಕೆ : ಹೆಚ್.ಜಿ. ಕೊಟ್ರೇಶಪ್ಪನವರ ಜಮೀನು**

**ಎ.ಎಂ. ಹೆಗಡೆ,** ವಕೀಲರು, ದಾವಣಗೆರೆ
# 612/1, 7ನೇ ಮೇನ್, ಪಿ.ಜೆ. ಬಡಾವಣೆ ದಾವಣಗೆರೆ
**ಮೊ: 94483 05888**


**ಅಭಿನಂದನೆಗಳು**



ಉನ್ನತ ವಿದ್ಯಾಭ್ಯಾಸಕ್ಕಾಗಿ ನ್ಯೂಯಾರ್ಕ್‌ನ ಕೊಲಂಬಿಯಾ ಯೂನಿವರ್ಸಿಟಿ - ಯುಎಸ್‌ಎಗೆ ದಿನಾಂಕ 17-08-2021 ರಂದು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ತೆರಳುತ್ತಿರುವ

**ಕೃತಿಕ ಹುಣಸೇಹಳ್ಳಿ ಜಯಕುಮಾರ್**

ಅವರಿಗೆ ಹಾರ್ದಿಕ ಶುಭಾಶಯಗಳು.

ಪ್ರಯಾಣ ಸುಖಕರವಾಗಿರಲಿ ಎಂದು ಶುಭ ಹಾರೈಸುವವರು

- ಬಸವರಾಜ್, ಬ್ಲೂ ಮೌಂಟೇನ್ ಮತ್ತು ಶ್ರೀಮತಿ ಜಯಂತಿ
- ಡಾ|| ಗಣೇಶ್ ಬಿ.
- ಕು|| ಪಲ್ಲವಿ ಬಿ.
- ಬ್ಲೂ ಮೌಂಟೇನ್ ಎಲೆಕ್ಟ್ರೋಪ್ಲೇಟರ್ಸ್ ಸಿಬ್ಬಂದಿ ವರ್ಗ #81/1, ಪಿ.ಬಿ. ರಸ್ತೆ, ರೈತರ ಸಂಘ, ದಾವಣಗೆರೆ
- ಬ್ಲೂ ಮೌಂಟೇನ್ ಇಂಡಸ್ಟ್ರೀಸ್ ಸಿಬ್ಬಂದಿ ವರ್ಗ ಪ್ಲಾಟ್ ನಂ.3ಡಿ, ಕರೂರು ಇಂಡಸ್ಟ್ರೀಯಲ್ ಏರಿಯಾ, ಹರಿಹರ ರಸ್ತೆ, ದಾವಣಗೆರೆ

ಉಚಿತ ಶ್ರವಣ ದೋಷ ತಪಾಸಣೆ ಹಾಗೂ
ರಿಯಾಯಿತಿ ದರದಲ್ಲಿ
ಶ್ರವಣ ಯಂತ್ರವನ್ನು
ಮಾರಾಟ ಮಾಡಲಾಗುತ್ತದೆ



ದಾವಣಗೆರೆ ನಗರ ವ್ಯಾಪ್ತಿಯಲ್ಲಿರುವ ಹಿರಿಯ ನಾಗರಿಕರಿಗೆ ಮನೆ ಬಾಗಿಲಿಗೇ ಬಂದು ತಪಾಸಣೆಯನ್ನು ಮಾಡಲಾಗುವುದು.

ಕ್ರೆಸ್ಟ್
ವಾಕ್ ಮತ್ತು ಶ್ರವಣ ಕೇಂದ್ರ
3ನೇ ಮೇನ್, ಪಿ.ಜೆ. ಬಡಾವಣೆ
ನಾಡಿಗರ ಕಣ್ಣಿನ ಆಸ್ಪತ್ರೆ ಎದುರು, ದಾವಣಗೆರೆ.
ನೋಂದಾಯಿಸಲು : 97437 80492

# ರಂಭಾಪುರಿ ಜಗದ್ಗುರುಗಳಿಂದ ಶ್ರಾವಣ ತಪೋನುಷ್ಠಾನ



ಬಾಳೆಹೊನ್ನೂರು, ಆ.16 - ರಂಭಾಪುರಿ ಪೀಠದ ಜಗದ್ಗುರು ಶ್ರೀ ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 30ನೇ ವರ್ಷದ ಶ್ರಾವಣ ಮಾಸದ ಶಿವಪೂಜಾ ತಪೋನುಷ್ಠಾನವು ಮಲಯಾಚಲ ತಪೋಭೂಮಿ ಶ್ರೀ ಜಗದ್ಗುರು ರಂಭಾಪುರಿ ಮಹಾಪೀಠದಲ್ಲಿ ನಿನ್ನೆ ಆರಂಭಗೊಂಡಿದ್ದು, ಬರುವ ಸೆಪ್ಟೆಂಬರ್ 7ರ ವರೆಗೆ ನಡೆಯುವುದು.

ವರ್ಷದ 365 ದಿನ ರುದ್ರಾಭಿಷೇಕ ಹಾಗೂ ಶ್ರಾವಣ ಮಾಸ ಪರ್ಯಂತರ ಸಿಹಿ ಪ್ರಸಾದ ವಿತರಣೆಯನ್ನು ಭದ್ರಾವತಿಯ ಲಿಂ. ಎಸ್.ಜಿ.ಶಿವಶಂಕರಯ್ಯ ಅವರ ಮಕ್ಕಳು ನೆರವೇರಿಸುವರು.

ಶ್ರಾವಣ ಮಾಸದ ಪರ್ಯಂತರ ಪ್ರತಿ ದಿನ ಸಂಜೆ 7 ಗಂಟೆಗೆ ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನವನ್ನು ಉಟಗಿ ಹಿರೇಮಠದ ಶಿವಪ್ರಸಾದ ದೇವರು ನಡೆಸಿಕೊಡುತ್ತಾರೆ. ಪ್ರತಿ ಸೋಮವಾರ ಹಾಗೂ ಗುರುವಾರ ದಿನ ಶ್ರೀ ರಂಭಾಪುರಿ ಜಗದ್ಗುರುಗಳು ಧರ್ಮ ಸಂದೇಶ ದಯಪಾಲಿಸುವರು.

ಶ್ರೀ ರಂಭಾಪುರಿ ಜಗದ್ಗುರುಗಳವರು ಪ್ರತಿ ನಿತ್ಯ ನಡೆಸುವ ತ್ರಿಕಾಲ ಶ್ರಾವಣ ಪೂಜಾ ತಪೋನುಷ್ಠಾನದಲ್ಲಿ ಬೆಳಗ್ಗೆ 8 ಘಂಟೆಗೆ ಇಷ್ಟಲಿಂಗ ಮಹಾ ಪೂಜೆ ನಡೆಯಲಿದೆ.

# ಧನ್ಯೋಸ್ಮಿ ಸಂಘಟನೆಯಿಂದ 75 ಮೀ. ಉದ್ದದ ತಿರಂಗ ಯಾತ್ರೆ



ರಾಣೇಬೆನ್ನೂರು, ಆ.16- ತಾಲ್ಲೂಕಿನ ಕೋಡಿಯಾಲ ಹೊಸಪೇಟೆಯಲ್ಲಿ ಧನ್ಯೋಸ್ಮಿ ಭರತ ಭೂಮಿ ಸಂಘಟನೆ ವತಿಯಿಂದ 75ನೇ ಸ್ವಾತಂತ್ರ್ಯೋತ್ಸವದಂದು ನಗರದಲ್ಲಿ 75 ಮೀಟರ್ ಉದ್ದದ ತಿರಂಗ ಧ್ವಜದ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ರಾಜನಹಳ್ಳಿ ವಾಲ್ಮೀಕಿ ಮಠದ ಶ್ರೀ ಪ್ರಸನ್ನಾನಂದಪುರಿ ಶ್ರೀಗಳು ಮತ್ತು ಪುಣ್ಯಕೋಟಿ ಮಠದ ಜಗದೀಶ್ವರ ಶ್ರೀಗಳ ಸಾನ್ನಿಧ್ಯದಲ್ಲಿ ಕರ್ನಾಟಕ ರಾಜ್ಯ ವಾಯುವ್ಯ ಸಾರಿಗೆ ಸಂಸ್ಥೆಯ ನಿರ್ದೇಶಕ ಸಂತೋಷ್ ಕುಮಾರ್ ಪಾಟೀಲ ಯಾತ್ರೆಗೆ ಚಾಲನೆ ನೀಡಿದರು.

# ಮಗಳ ಮನೆಗೆ ಬಾಗಿನ ನೀಡಲು ಹೋಗಿದ್ದ ಮಹಿಳೆಯ ಮನೆಗೆ ಕನ್ನ

ದಾವಣಗೆರೆ, ಆ.16- ಬಾಗಿನ ನೀಡಲೆಂದು ಬೇರೆ ಊರಿನಲ್ಲಿರುವ ಮಗಳ ಮನೆಗೆ ತಮ್ಮ ಮನೆಗೆ ಬೀಗ ಹಾಕಿಕೊಂಡು ಮಹಿಳೆಯೋರ್ವರು ಹೋಗಿದ್ದನ್ನೇ ಬಂಡವಾಳವಾಗಿಸಿಕೊಂಡ ಕಳ್ಳರೂ, ಮನೆಗೆ ಕನ್ನ ಹಾಕಿ ಒಟ್ಟು 46,500 ರೂ. ಮೌಲ್ಯದ ಚಿನ್ನಾಭರಣ ಮತ್ತು 20 ಸಾವಿರ ನಗದು ದೋಚಿರುವ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಲೇಬರ್ ಕಾಲೋನಿ 2ನೇ ಕ್ರಾಸ್‌ನಲ್ಲಿ ನಡೆದಿದೆ.

ಜಯಮ್ಮ ಎಂಬಾಕೆ ಇದೇ ದಿನಾಂಕ 12 ರಂದು ಮನೆಗೆ ಬೀಗ ಹಾಕಿ ಚಿಕ್ಕಮಗಳೂರಿಗೆ ಹೋಗಿದ್ದ ಸಂದರ್ಭದಲ್ಲಿ ಮನೆಯ ಬಾಗಿಲ ಕೊಂಡಿ ಮುರಿದು ಒಳನುಗ್ಗಿರುವ ಕಳ್ಳರು, ಈ ಕೃತ್ಯ ನಡೆಸಿದ್ದಾರೆ.

# ಹರಿಹರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಅಂಜಿನಮ್ಮ



ಹರಿಹರ, ಆ.16- ಕೊಕ್ಕನೂರು ಗ್ರಾಮದ ಶ್ರೀಮತಿ ಅಂಜಿನಮ್ಮ ಅವರು ಹರಿಹರ ಪಿಎಲ್‌ಡಿ ಬ್ಯಾಂಕಿನ ಅಧ್ಯಕ್ಷರಾಗಿ ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬೆಳ್ಳೂಡಿ ಸಿದ್ದವೀರಪ್ಪ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು.

ಸಿಡಿಪಿಓ ರುದ್ರಪ್ಪ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಬ್ಯಾಂಕಿನ ವ್ಯವಸ್ಥಾಪಕರಾದ ನಿರ್ಮಲಾ ಸಹಕರಿಸಿದರು. ಬ್ಯಾಂಕಿನ ಉಪಾಧ್ಯಕ್ಷ ರವೀಂದ್ರನಾಥ್ ಸೇರಿದಂತೆ ಬಹುತೇಕ ನಿರ್ದೇಶಕರು ಈ ವೇಳೆ ಹಾಜರಿದ್ದರು.

ನೂತನ ಅಧ್ಯಕ್ಷರನ್ನು ಹಿರಿಯ ಮುಖಂಡ ಸಿರಿಗೆರೆ ನಾಗನಗೌಡ್ರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ವಾಗೀಶ್‌ಸ್ವಾಮಿ, ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

# ಶಾಸಕ ಎಂಪಿಆರ್‌ಗೆ 'ವಿಶೇಷ ಕೊರೊನಾ ವಾರಿಯರ್' ಪ್ರಶಸ್ತಿ



ಕೆಲವರು ನಾನು ಮದವೇರಿದ ಆನೆ ಎನ್ನುತ್ತಾರೆ. ನಾನು ಮದವೇರಿದ ಆನೆಯಲ್ಲ, ಬದಲಿಗೆ ಪಳಗಿದ ಆನೆ. ಯಾವ ಸಂದರ್ಭದಲ್ಲಿ ಏನು ಮಾಡಬೇಕು, ಏನು ಮಾತನಾಡಬೇಕು? ಎಂಬುದನ್ನು ಕಲಿತಿದ್ದೇನೆ ಎಂದು ಹೇಳಿದ ಅವರು, ಕ್ಷೇತ್ರದ ಮತದಾರರು ಉಪಯೋಗ ಪಡೆಯಬಹುದು

**- ಎಂ.ಪಿ.ರೇಣುಕಾಚಾರ್ಯ, ಶಾಸಕರು**

ಹೊನ್ನಾಳಿ, ಆ.16- ಶಾಸಕನಾಗಿ, ಮಂತ್ರಿಯಾಗಿ ನಾವು ಬೆಳೆಯಲು ಪತ್ರಿಕೆಗಳ ಪಾತ್ರ ದೊಡ್ಡದಿದೆ. ಸ್ಥಳೀಯ ಪತ್ರಕರ್ತರು ಆರಂಭದಲ್ಲಿ ನನ್ನ ಕೆಲಸ ಕಾರ್ಯಗಳನ್ನು ಟೀಕಿಸಿ, ತಪ್ಪುಗಳನ್ನು ತಿದ್ದಿ ತೀಡಿದ ಪರಿಣಾಮ ನಾನು ರಾಜಕೀಯವಾಗಿ ಮೇಲೆ ಬರಲು ಸಾಧ್ಯವಾಯಿತು ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ಅಭಿಪ್ರಾಯಪಟ್ಟರು.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ನಿನ್ನೆ ಇಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ, ಸಂಘ ನೀಡಿದ 'ವಿಶೇಷ ಕೊರೊನಾ ವಾರಿಯರ್ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

ಹೆಚ್ಚು ಓದಿರದ ತಾವು ರಾಜಕೀಯ ಕ್ಷೇತ್ರದಲ್ಲಿ ಆರಂಭದಲ್ಲಿ ಯಾವ ಅನುಭವವೂ ಇಲ್ಲದೇ ಧೈರ್ಯದಿಂದ ತಾಲ್ಲೂಕಿನಾದ್ಯಂತ ಸಂಚರಿಸಿ ಪಕ್ಷ ಸಂಘಟಿಸಿ, ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಶಾಸಕನಾದೆ ಎಂದು ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಪತ್ರಿಕೆಗಳಲ್ಲಿ ಆರೋಗ್ಯಕರ ಸ್ಪರ್ಧೆಬೇಕು. ಸುದ್ದಿ ಮಾಡುವ ಧಾವಂತದಲ್ಲಿ ಸುಳ್ಳು ಸುದ್ದಿಗಳನ್ನು ಪ್ರಕಟಿಸಬಾರದು. ಕೆಲವೊಂದು ಪತ್ರಿಕೆಗಳು ಈ ಕೆಲಸ ಮಾಡುತ್ತಿವೆ. ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗಿ, ಓದುಗರ ನಂಬಿಕೆಯನ್ನು ಪತ್ರಿಕೆಗಳು ಕಳೆದುಕೊಳ್ಳದಂತೆ ಪತ್ರಕರ್ತರರಲ್ಲಿ ಜಾಗೃತಿ ಇರಬೇಕು. ಪತ್ರಿಕೆಗಳಿಲ್ಲದ ದಿನಗಳನ್ನು ನಾವು ನೀವೆಲ್ಲ ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಕೊರೊನಾ ಸಂದರ್ಭದಲ್ಲಿ ಪತ್ರಕರ್ತರು ನನ್ನ ಜೊತೆಗೆ ಹೆಜ್ಜೆ ಹಾಕಿ ಜನರಲ್ಲಿ ಜಾಗೃತಿ ಮೂಡಿಸಿದ್ದು. ನನಗೆ ಸಲ್ಲಬೇಕಾದ ಗೌರವ ಅವರಿಗೂ ಸಲ್ಲಬೇಕು ಎಂದರು.

ತಹಶೀಲ್ದಾರ್ ಬಸವನಗೌಡ ಕೋಟೂರ ಮಾತನಾಡಿ, ಪತ್ರಿಕೆಗಳು ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾ ನಂತರದಲ್ಲಿ ತಮ್ಮದೇಯಾದ ಕೊಡುಗೆ ನೀಡಿ ಕರ್ನಾಟಕ ಏಕೀಕರಣ ಸಂದರ್ಭದಲ್ಲೂ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಿವೆ ಎಂದರು.

ಪಿಎಸ್‌ಐ ಬಸವನಗೌಡ ಬಿರಾದಾರ್ ಮಾತನಾಡಿ, ಪತ್ರಿಕೆಗಳಿಂದ ಎಷ್ಟೋ ಸಮಸ್ಯೆಗಳು ಬಗೆಹರಿದಿವೆ. ಇದು ನಮ್ಮ ಗಮನಕ್ಕೆ ಸಾಕಷ್ಟು ಬಾರಿ ಬಂದಿದೆ. ಎಷ್ಟೋ ವಿಷಯಗಳನ್ನು ಪತ್ರಕರ್ತರು ನಮಗೆ ಮುಂಚಿತವಾಗಿಯೇ ಮಾಹಿತಿ ನೀಡಿ, ನಮ್ಮ ಅನೇಕ ಕೆಲಸಗಳನ್ನು ಸುಲಭವಾಗಿಸುತ್ತಾರೆ ಎಂದರು.

ಪುರಸಭಾ ಅಧ್ಯಕ್ಷ ಕೆ.ವಿ. ಶ್ರೀಧರ್ ಮಾತನಾಡಿದರು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಕೆ. ನಾಗರಾಜ್ ಪತ್ರಿಕೆ ಬೆಳೆದು ಬಂದ ಬಗ್ಗೆ ಉಪನ್ಯಾಸ ನೀಡಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಮೃತ್ಯುಂಜಯ ಪಾಟೀಲ್ ಅಧ್ಯಕ್ಷೀಯ ಮಾತುಗಳನ್ನಾಡಿದರು.

ಟಿ. ಶ್ರೀನಿವಾಸ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಎಸ್. ಯೋಗಿಶ್ ಸ್ವಾಗತಿಸಿ, ಚಿನ್ಮಯ್ ಪಾಟೀಲ್ ಪ್ರಾರ್ಥಿಸಿ ಎನ್.ಕೆ. ಆಂಜನೇಯ ನಿರೂಪಿಸಿ ಚನ್ನೇಶ್ ಇದಿರಮನಿ ವಂದಿಸಿದರು.

# ಕುಂಡೆ-ಕುಸ್ಕ ಕಪ್ಪುಬಿಳಿ ಸಿಪಿಲೆ



ದಾವಣಗೆರೆಯಲ್ಲಿ ಹಲವು ಸ್ಥಳಿಯ ಮತ್ತು ವಲಸೆ ಬರುವ ಸಿಪಿಲೆ (Wagtail) ಹಕ್ಕಿಗಳಿವೆ. ಅವುಗಳಲ್ಲಿ ಒಂದು ಪ್ರಭೇದ ಕಪ್ಪು-ಬಿಳಿ ಸಿಪಿಲೆ. ಇದರ ಆಂಗ್ಲ ಭಾಷೆಯ ಸಾಮಾನ್ಯ ಹೆಸರು: ವೈಟ್-ಬ್ರೊಡ್ ವ್ಯಾಗ್‌ಟೈಲ್ (White-browed Wagtail) ಮತ್ತು ವೈಜ್ಞಾನಿಕವಾಗಿ ಮೊಟಾಸಿಲ್ಲ ಮೆಡರಸ್ಪಟೆನ್‌ಸಿಸ್ (Motacilla maderaspatensi) ಎಂದು ಕರೆಯಲ್ಪಡುತ್ತದೆ.

**ಗುಣಲಕ್ಷಣಗಳು:** ಬುಲ್ ಬುಲ್ ಹಕ್ಕಿಗಿಂತ ಸ್ವಲ್ಪ ದೊಡ್ಡದು (ಗಾತ್ರ 21 ಸೆಂಮೀ.). ಕಪ್ಪು ಬಿಳಿ ಪುಕ್ಕಗಳಿರುವ ದೊಡ್ಡ ಸಿಪಿಲೆ ಹಕ್ಕಿ. ಗಂಡು ಹಕ್ಕಿಯಲ್ಲಿ ಹೊಳೆಯುವ ಕಪ್ಪು ಬಣ್ಣದ ತಲೆ, ಗಂಟಲು ಮತ್ತು ಎದೆ. ಬಿಳಿಯದಾದ ಕೆಳಭಾಗ. ರೆಕ್ಕೆಗಳ ಮತ್ತು ಬಾಲದ ಅಂಚು ಬಿಳಿಯ ಬಣ್ಣದ್ದು. ಹೆಣ್ಣು ಹಕ್ಕಿಯಲ್ಲಿ ಗಂಡಿನ ಕಪ್ಪು ಜಾಗಗಳ ಬದಲಿಗೆ ಕಂದು ಮಿಶ್ರಿತ ಪೇಲವ ಕಪ್ಪು ಬಣ್ಣ. ಸಾಮಾನ್ಯವಾಗಿ ಜೊತೆಯಲ್ಲಿ ನೀರಿರುವ ತಾಣಗಳ ಹತ್ತಿರ ಕಾಣ ಸಿಗುತ್ತವೆ. ಆಗಾಗ್ಗೆ ಬಾಲವನ್ನು ಕುಣಿಸುತ್ತಿರುತ್ತವೆ. ಹಾರಿ ಬಂದು ಕುಳಿತೊಡನೆ ಶಕ್ತಿಯಿಲ್ಲದೆ ಬಿದ್ದಹಾಗೆ ಇದರ ಬಾಲ ಕೆಳಗೆ ಬೀಳುವುದು. ಹಾಗಾಗಿ ಇವುಗಳನ್ನು ಕುಂಡೆ-ಕುಸ್ಕ ಎಂದು ಸಹ ಕರೆಯುತ್ತಾರೆ.

**ಆವಾಸ:** ನದಿ, ಕೆರೆ, ಸರೋವರ ಮತ್ತು ಇತರೆ ನೀರಿರುವ ಪ್ರದೇಶಗಳ ಸುತ್ತ ವಾಸಿಸುತ್ತವೆ. ಈಶಾನ್ಯ ರಾಜ್ಯಗಳನ್ನು ಹೊರತು ಪಡಿಸಿ ಭಾರತದ್ಯಾದಂತ ಇವೆ. ಕೂಗು: ಮೃದುವಾದ ಸಂಗೀತಮಯ ಸಿಳ್ಳೆ ಯಂತಹ ಸ್ವೀ... ಸಿ.ಸಿ.ಸಿ ಎಂಬಂತಹ ಧ್ವನಿ.

**ಆಹಾರ:** ಕೀಟಗಳು. ನೆಲದ ಮೇಲೆ ಚುರುಕಾಗಿ, ಉತ್ಸಾಹದಿಂದ, ಅಚೀಚೆ ಓಡಾಡುತ್ತಾ ಕೀಟಗಳನ್ನು ಹಿಡಿದು ತಿನ್ನುತ್ತವೆ.

**ಸಂತಾನೋತ್ಪತ್ತಿ:** ಮಾರ್ಚ್‌ನಿಂದ ಸೆಪ್ಟೆಂಬರ್‌ವರೆಗೆ. ನೀರಿನ ಹತ್ತಿರದಲ್ಲಿ, ಬಂಡೆ ಕಲ್ಲುಗಳ ಅಥವಾ ಸೇತುವೆ ಕೆಳಗಿನ ಸಂಧಿಗಳಲ್ಲಿ ಅಥವಾ ಮನೆಗಳ ಸೂರಿನ ಕೊರಕಲಿನಲ್ಲಿ, ಗೂಡನ್ನು ಮಾಡುತ್ತವೆ. ಬೇರುಗಳು, ಕೂದಲು, ಉಣ್ಣೆ, ಒಣಗಿದ ಪಾಚಿ ಮುಂತಾದವುಗಳಿಂದ ತಯಾರಾದ ಬಟ್ಟಲಿನಂತಹ ಗೂಡು. ಬೂದು, ಕಂದು ಅಥವಾ ಹಸಿರು-ಮಿಶ್ರಿತ ಬಿಳಿ ಬಣ್ಣದ ಮೊಟ್ಟೆಗಳಲ್ಲಿ ಕಂದು ಬಣ್ಣದ ಮಚ್ಚೆ/ಗೆರೆಗಳಿರುತ್ತವೆ. ಒಂದು ಬಾರಿಗೆ ಮೂರರಿಂದ ನಾಲ್ಕು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ತಂದೆ-ತಾಯಿಯರಿಬ್ಬರೂ ಮರಿಗಳ ಪೋಷಣೆ ಮಾಡುತ್ತವೆ.

ಇಂತಹ ಉತ್ಸಾಹ ಭರಿತ ಹಕ್ಕಿಯ ಚಟುವಟಿಕೆಯನ್ನು ನೋಡುತ್ತಾ ಅದರ ಮೃದುವಾದ ಸಂಗೀತ ಕೇಳಿದರೆ ಮನಸ್ಸು ಆಹ್ಲಾದಗೊಳ್ಳುತ್ತದೆ. ವ್ಯವಹಾರಿಕ ಬದುಕಿನಿಂದ ಹೊರಬಂದು ಒಳ್ಳೆಯ ಪರಿಸರದಲ್ಲಿನ ಓಡಾಟ, ಪ್ರಕೃತಿಯನ್ನು ಆಸ್ವಾದಿಸುವಂತೆ ಮಾಡುವುದು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು ಎಂಬುದು ವೈಜ್ಞಾನಿಕವಾಗಿ ರುಜುವಾತಾಗಿದೆ. ಇಂತಹ ದಿನಚರಿಯನ್ನು ಅಳವಡಿಸಿಕೊಂಡರೆ ಶಾಂತಚಿತ್ತರಾಗಿ ತಮ್ಮ ಕೆಲಸವನ್ನು ಕ್ಷೋಭೆಗೊಳಗಾಗದೆ ಮಾಡಬಹುದು.

**ಡಾ. ಎಸ್. ಶಿಶುಪಾಲ,** ಪ್ರಾಧ್ಯಾಪಕರು,
ಸೂಕ್ಷ್ಮ ಜೀವಿಶಾಸ್ತ್ರ ವಿಭಾಗ, ದಾವಣಗೆರೆ
ವಿಶ್ವವಿದ್ಯಾಲಯ, **8792674905**

# ಸಿದ್ಧನಮಠದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನದ ಉದ್ಘಾಟನೆ



ಚನ್ನಗಿರಿ, ಆ.16- ಸಮೀಪದ ಸಿದ್ಧನಮಠದಲ್ಲಿ ನೂತನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಸಂಸದ ಜಿ.ಎಂ. ಸಿದ್ದೇಶ್ವರ ಇಂದು ಉದ್ಘಾಟಿಸಿದರು.

ಶಾಸಕ ಮಾಡಾಳು ವಿರೂಪಾಕ್ಷಪ್ಪ, ಪಂಚಾಯಿತಿ ಅಧ್ಯಕ್ಷ ಎಸ್.ಹೆಚ್.ರಾಜು, ದೇವಸ್ಥಾನದ ಕಟ್ಟಡ ದಾನಿ ನಿವೃತ್ತ ಇಂಜಿನಿಯರ್ ಬಿ.ಎಸ್.ರಾಜಪ್ಪ, ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪ್ರೊ. ಎಸ್.ಬಿ.ರಂಗನಾಥ್, ಎಸ್.ಬಿ ರಾಜಶೇಖರಪ್ಪ, ರಾಮಣ್ಣ ಮತ್ತಿತರರು ಭಾಗವಹಿಸಿದ್ದರು.

# ಹರಿಹರದ ನಗರಸಭೆ : 14ನೇ ವಾರ್ಡ್‌ನ ಚುನಾವಣಾ ಪ್ರಕ್ರಿಯೆ ಆರಂಭ

ಹರಿಹರ, ಆ.16- ಇಲ್ಲಿನ ನಗರಸಭೆಯ 14ನೇ ವಾರ್ಡ್‌ಗೆ ಬರುವ ಸೆಪ್ಟಂಬರ್ 3 ರಂದು ನಡೆಯಲಿರುವ ಉಪ ಚುನಾವಣೆಗೆ ಇಂದಿನಿಂದ ನಾಮಪತ್ರ ಸ್ವೀಕಾರ ಪ್ರಕ್ರಿಯೆ ಆರಂಭವಾಗಿದೆ.

ಮೊದಲ ದಿನ ಯಾವುದೇ ನಾಮಪತ್ರಗಳು ಸ್ವೀಕೃತಗೊಂಡಿಲ್ಲ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

# ವೀರ ಮದಕರಿ ನಾಯಕ ಕಂಚಿನ ಪುತ್ಥಳಿಗೆ ಶ್ರೀಗಳಿಂದ ಮಾಲಾರ್ಪಣೆ



ದಾವಣಗೆರೆ, ಆ.16- ನಗರದ ಶ್ರೀ ವೀರ ಮದಕರಿ ನಾಯಕ (ಹೊಂಡದ ಸರ್ಕಲ್) ವೃತ್ತದಲ್ಲಿರುವ 'ಗಂಡುಗಲಿ ವೀರ ಮದಕರಿ ನಾಯಕ' ಕಂಚಿನ ಪುತ್ಥಳಿ ಪ್ರತಿಷ್ಠಾಪಿಸಿ, 23 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ನಿನ್ನೆ ಸಂಭ್ರಮೋತ್ಸವ ಆಚರಿಸಲಾಯಿತು.

ರಾಜನಹಳ್ಳಿಯ ವಾಲ್ಮೀಕಿ ನಾಯಕ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಗಂಡುಗಲಿ ವೀರ ಮದಕರಿ ನಾಯಕ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಜಿಲ್ಲಾ ನಾಯಕ ಸಮಾಜ ಮತ್ತು ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ. ವೀರಣ್ಣ, ನಗರ ಪಾಲಿಕೆ ಸದಸ್ಯ ವಿನಾಯಕ ಪೈಲ್ವಾನ್, ನಾಯಕ ವಿದ್ಯಾರ್ಥಿ ನಿಲಯದ ನಿರ್ದೇ ಶಕ ಕೆ.ಆರ್. ಮಂಜುನಾಥ ಶ್ಯಾಗಲೆ, ವಕೀಲ ಎನ್.ಎಂ.ಆಂಜನೇಯ ಗುರೂಜಿ, ನಗರ ಪಾಲಿಕೆ ಮಾಜಿ ಸದಸ್ಯ ಎಸ್. ಬಸಪ್ಪ, ಕರಿಗಾರ ಬಸಪ್ಪ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

## ಜಿಲ್ಲೆಯಲ್ಲಿ 5 ಪಾಸಿಟಿವ್, 6 ಗುಣಮುಖ

ದಾವಣಗೆರೆ, ಆ.15- ಜಿಲ್ಲೆಯಲ್ಲಿ ಸೋಮವಾರ 5 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 6 ಜನ ಗುಣಮುಖರಾಗಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 4 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿ ಕೊಂಡಿದೆ. ಜಿಲ್ಲೆಯಲ್ಲಿ 183 ಸಕ್ರಿಯ ಪ್ರಕರಣಗಳಿವೆ.

# ಮೆಕ್ಕೆಜೋಳ ಖರೀದಿಸಿ ಹಣ ನೀಡದೆ ವಂಚನೆ : ಬಂಧನ

ದಾವಣಗೆರೆ, ಆ.16- ಮೆಕ್ಕೆಜೋಳ ಖರೀದಿಸಿ ಹಣ ನೀಡದೆ ವಂಚಿಸಿದ ಆರೋಪದಲ್ಲಿ ಕೋಳಿ ಉತ್ಪನ್ನಗಳ ಕಂಪನಿಯ ಪಾಲುದಾರನನ್ನು ಹರಿಹರ ನಗರ ಪೊಲೀಸರು ಬಂಧಿಸಿದ್ದು, ರಾಜ್ಯದಲ್ಲಷ್ಟೇ ಅಲ್ಲದೇ ಹೊರ ರಾಜ್ಯಗಳಲ್ಲೂ ಆರೋಪಿತನ ವಂಚನೆ ಪ್ರಕರಣ ಪತ್ತೆ ಮಾಡಿದ್ದಾರೆ.

ಪಯೋನೀರ್ ಫೀಡ್ಸ್ ಅಂಡ್ ಪೌಲ್ಟ್ರಿ ಪ್ರಾಡಕ್ಟ್ಸ್‌ನ ಪಾಲುದಾರ ನಂದ ಕುಮಾರ ಬಂಧಿತನು. ಈತ 2008 ರಲ್ಲಿ ಹರಿಹರದ ದೊಸ್ತಾನಾ ಟ್ರೇಡರ್ಸ್‌ನ ಮಾಲೀಕ ಖಲೀಲ್ ದೊಸ್ತಾನಾ ಅವರ ಬಳಿ ಸುಮಾರು 1 ಕೋಟಿ ಮೌಲ್ಯದ ಮೆಕ್ಕೆಜೋಳವನ್ನು ಖರೀದಿಸಿ, ನೀಡಿದ್ದ ಚೆಕ್ ಬೌನ್ಸ್ ಆಗಿದ್ದು, ಸುಮಾರು ದಿನಗಳಾದರೂ ಮೆಕ್ಕೆ ಜೋಳದ ಹಣವನ್ನು ನೀಡಲಿಲ್ಲ. ಆಗ ಖಲೀಲ್ ಚೆಕ್ ಬೌನ್ಸ್ ಬಗ್ಗೆ ಹಾಗೂ ಹಣ ನೀಡದೆ ವಂಚಿಸಿದ ಬಗ್ಗೆ ನ್ಯಾಯಾಲಯದಲ್ಲಿ ಕೇಸ್ ದಾಖಲು ಮಾಡಿದ್ದರು.

ನಂದ ಕುಮಾರ್‌ಗೆ ಪ್ರಕರಣದ ಸಂಬಂಧ ಹಾಜರಾಗುವಂತೆ ನ್ಯಾಯಾಲಯವು 33 ಬಾರಿ ವಾರೆಂಟ್ ಜಾರಿ ಮಾಡಿದ್ದರೂ ಹಾಜರಾಗದ ಕಾರಣ ಹರಿಹರದ ಜೆಎಂಎಫ್‌ಸಿ ನ್ಯಾಯಾಲಯವು ಜುಲೈ 17,2021 ರಂದು ಬಂಧನದ ವಾರೆಂಟ್ ಜಾರಿ ಮಾಡಿ ನಂದ ಕುಮಾರನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆದೇಶಿಸಿತ್ತು. ಅಂತೆಯೇ ಹರಿಹರ ನಗರ ಪೊಲೀಸ್ ಠಾಣೆ ಪಿಎಸ್‌ಐ ಸುನೀಲ್ ತೇಲಿ, ಎಎಸ್‌ಐ ಮೈಕಲ್ ಆಂತೋನಿ ಮತ್ತು ಸಿಬ್ಬಂದಿಗಳಾದ ಸತೀಶ್, ಶಿವರಾಜ್ ಒಳಗೊಂಡ ತಂಡವು ಆರೋಪಿತ ನಂದಕುಮಾರನನ್ನು ತಮಿಳುನಾಡಿನ ತಿರುಪುರದಲ್ಲಿ ಬಂಧಿಸಿದೆ.

ಆರೋಪಿತ ನಂದಕುಮಾರನು ಹರಿಹರದ ಪ್ರಕರಣ ಸೇರಿದಂತೆ ದಾವಣಗೆರೆ, ಹೊನ್ನಾಳಿ, ರಾಣೇಬೆನ್ನೂರು, ಹಾವೇರಿ, ಬೆಂಗಳೂರು, ಶಿವಮೊಗ್ಗ, ಕೊಟ್ಟೂರು ವರ್ತಕರಲ್ಲಿ ಸುಮಾರು 10 ಕೋಟಿ 63 ಲಕ್ಷಕ್ಕೂ ಹೆಚ್ಚು ಮೊತ್ತದ ಮೆಕ್ಕೆಜೋಳ ಖರೀದಿಸಿ ಹಣ ಪಾವತಿಗೆ ನೀಡಿದ್ದ ಚೆಕ್‌ಗಳೂ ಬೌನ್ಸ್ ಆಗಿರುವುದು ಬೆಳಕಿಗೆ ಬಂದಿದೆ.





## ಸ್ವಾತಂತ್ರ್ಯದ ಅಮೃತ ಮಹೋತ್ಸವ ಹೋರಾಟಗಾರರನ್ನು ಸನ್ಮಾನಿಸಿದ ಜಿಲ್ಲಾಡಳಿತ

ದಾವಣಗೆರೆ, ಆ.16- ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪಿಗಾಗಿ ದಾವಣಗೆರೆ ತಾಲ್ಲೂಕು ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಎಸ್ ಸಿದ್ರಾಮಪ್ಪ ಹಾಗೂ ಶಿವಲಿಂಗಸ್ವಾಮಿ ಅವರುಗಳನ್ನು ಅವರ ಸ್ವಗೃಹದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ನಿನ್ನೆ ಸನ್ಮಾನಿಸಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್ ಉಪಸ್ಥಿತರಿದ್ದರು.

# ರಾಣೇಬೆನ್ನೂರಿನಲ್ಲಿ ಕಾಂಗ್ರೆಸ್ ನೂತನ ಕಟ್ಟಡಕ್ಕೆ ಅಡಿಗಲ್ಲು

## ಸಿ.ಟಿ.ರವಿ ಉದ್ಧಟತನದ ಹೇಳಿಕೆಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಖಂಡನೆ



ರಾಣೇಬೆನ್ನೂರು, ಆ.16- ದೇಶದ ಸ್ವಾತಂತ್ರ್ಯಕ್ಕಾಗಿ 35 ವರ್ಷ ಹೋರಾಟ ಮಾಡಿ, 9 ವರ್ಷ ಸೆರೆಮನೆಯಲ್ಲಿದ್ದ ಜವಾಹರಲಾಲ್ ನೆಹರು ಅವರ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡುವುದು, ಸ್ವಾತಂತ್ರ್ಯ ಸಿಗಲು ಮಹಾತ್ಮ ಗಾಂಧಿ ಕಾರಣರಲ್ಲ ಎನ್ನುವ ಸಿ.ಟಿ ರವಿ ಅವರ ಮಾತುಗಳು ಉದ್ಧಟತನದಿಂದ ಕೂಡಿವೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಹೇಳಿದರು.

ನಿನ್ನೆ ಇಲ್ಲಿ ಕಾಂಗ್ರೆಸ್ ಕಛೇರಿಯ ನೂತನ ಕಟ್ಟಡ ಕೆ.ಬಿ.ಕೋಳಿವಾಡ ಸಭಾ ಭವನಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ವಿರೋಧ ಪಕ್ಷದವರನ್ನು ಕಡೆಗಣಿಸಿ ವಿಧೇಯಕಗಳನ್ನು ಮಂಡಿಸಿ ಒಪ್ಪಿಗೆ ಪಡೆದುಕೊಳ್ಳುವ, ಕಾನೂನು ರಚಿಸುವ ಬಿಜೆಪಿ ಆಡಳಿತದಿಂದ ಪ್ರಜಾಪ್ರಭುತ್ವ ಸಂಪೂರ್ಣ ನಾಶವಾಗಿದೆ. ಬಿಜೆಪಿ ಹಾಗೂ ಸಿ.ಟಿ.ರವಿ ಅಂತವರನ್ನು ಮನೆಗೆ ಕಳಿಸಲು ಈಗ ಸೂಕ್ತ ಸಮಯ ಬಂದಿದ್ದು, ಅದಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರು ಇಂದು ಶಪಥ ಮಾಡಬೇಕು ಎಂದು ಪ್ರಕಾಶ್ ಮನವಿ ಮಾಡಿದರು.

45 ವರ್ಷಗಳಿಂದ ರಾಣೇಬೆನ್ನೂರಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದ ಕೆ.ಬಿ. ಕೋಳಿವಾಡರ ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ಪಕ್ಷದ ಕಛೇರಿ ಕಟ್ಟಡ ಅವರ ಹುಟ್ಟುಹಬ್ಬ ನವೆಂಬರ್ 1 ರಂದು ಉದ್ಘಾಟನೆಯಾಗಬೇಕು ಎಂದು ಗ್ರಾಮೀಣ ಕಾಂಗ್ರೆಸ್ ಘಟಕದ ಅಧ್ಯಕ್ಷ ಮಂಜನಗೌಡ ಪಾಟೀಲ್ ಆಶಯ ವ್ಯಕ್ತಪಡಿಸಿದರು.

ಕಾರ್ಯಕರ್ತರ ಸಮಾವೇಶ, ಎಲ್ಲಾ ಪದಾಧಿಕಾರಿಗಳಿಗೆ ಪ್ರತ್ಯೇಕ ಕೊಠಡಿ, ಕಾಂಗ್ರೆಸ್ ಇತಿಹಾಸ ಪರಿಚಯಿಸುವ ಗ್ರಂಥಾಲಯ, ಹೀಗೆ ಸಕಲ ಸೌಲಭ್ಯಗಳಿರುವ ಕಟ್ಟಡ ಇದಾಗಲಿ. ತಾಲ್ಲೂಕಿನ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಛೇರಿ ಆಗಲಿ ಎಂದು ಮಾತನಾಡಿದವರು ಶುಭ ಕೋರಿದರು.

ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕುಮಾರ ಬತ್ತಿಕೊಪ್ಪ, ನಗರಸಭೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ, ಪಕ್ಷದ ಮುಖಂಡರುಗಳಾದ ಶೇರು ಕಾಬೂಲಿ, ಆರ್.ಎಂ. ಕುಬೇರಪ್ಪ, ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ತಾಪಂ ಮಾಜಿ ಅಧ್ಯಕ್ಷ ನೀಲಕಂಠಪ್ಪ ಕುಸಗೂರ, ಬಿ. ಎಸ್.ಮರದ ಮತ್ತಿತರರಿದ್ದರು. ಇರ್ಫಾನ್ ದಿಡಗೂರ ಕಾರ್ಯಕ್ರಮ ನಿರೂಪಿಸಿದರು.

# ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾಗಿ ಡಾ. ಸುಶೀಲಮ್ಮ ಪುನರಾಯ್ಕೆ



ದಾವಣಗೆರೆ, ಆ.16 - ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ, ಅಧ್ಯಾತ್ಮ ಸಂಸ್ಥೆ ನಗರದ ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾಗಿ ಡಾ॥ ಸುಶೀಲಮ್ಮ ಪುನರಾಯ್ಕೆಯಾಗಿದ್ದಾರೆ.

ಪರಿವಾರದ ಗೌರವಾಧ್ಯಕ್ಷ ಕೆ.ಹೆಚ್. ಮಂಜುನಾಥ್ ಅಧ್ಯಕ್ಷತೆಯಲ್ಲಿ ಸಂಸ್ಥೆಯ ಕಛೇರಿಯಲ್ಲಿ ಕಳೆದ ವಾರ ನಡೆದ ಸಂಸ್ಥೆಯ ಸರ್ವ ಸದಸ್ಯರ ಮಹಾಸಭೆಯಲ್ಲಿ ಈ ಆಯ್ಕೆ ನಡೆಯಿತು.

ಉಪಾಧ್ಯಕ್ಷರಾಗಿ ಡಾ.ರಮೇಶ್ ಪಟೇಲ್, ಸತ್ಯನಾರಾಯಣಮೂರ್ತಿ, ಕೆ.ಸೂರ್ಯನಾರಾಯಣ, ಖಜಾಂಚಿಯಾಗಿ ಪುರುಷೋತ್ತಮ ಡಿ.ಪಟೇಲ್, ಪ್ರಧಾನ ಕಾರ್ಯದರ್ಶಿಯಾಗಿ ಭಾವನಾರಾಯಣ, ಕಛೇರಿ ಕಾರ್ಯದರ್ಶಿಯಾಗಿ ವಿಜಯಕುಮಾರ್ ಶೆಟ್ಟಿ, ಸಮಿತಿ ಸದಸ್ಯರಾಗಿ, ಎಸ್.ಶಾರದಮ್ಮ, ವಸಂತಿ ಮಂಜುನಾಥ್, ಜಿ.ಬಿ.ಲೋಕೇಶ್, ಎಸ್. ಶಿವನಪ್ಪ, ಸುಮಾ ಏಕಾಂತಪ್ಪ, ನಿರ್ಮಲರಾಜೇಂದ್ರ ಬಾಬು, ಜ್ಯೋತಿ ಗಣೇಶ್‌ಶೆಣೈ ಆಯ್ಕೆಯಾಗಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ತರಳಬಾಳು ಬಡಾವಣೆ ಮತ್ತು ವಿದ್ಯಾನಗರ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte